## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 09
2. ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 27.01.2026
4. ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಹಟ್ಟಿ ಚಿನ್ನದ ಗಣಿಯು 65 ಎಂ ಎಂ ಫೋರ್ಜ್ಡ್ ಸ್ಟೀಲ್ ಗ್ರೈಂಡಿಂಗ್ ಮೀಡಿಯಾ ಬಾಲ್ಸ್ ಸರಬರಾಜಿಗೆ ಯಾವ ಕಂಪನಿಗೆ ಟೆಂಡರ್ ನೀಡಲಾಗಿದೆ; ಮಹಿಳಾ IAS ಅಧಿಕಾರಿಯ ಪತಿಯವರು ಈ ಕಂಪನಿಗಳಿಗೆ ಅತ್ಯಾಸಕ್ತಿ ವಹಿಸಿದ್ದಾರೆ ಎಂಬ ಕಾರಣಕ್ಕಾಗಿ ನೀಡಲಾಗಿದೆಯೇ (ಕಂಪನಿ ಹೆಸರಿನೊಂದಿಗೆ ವಿವರ ನೀಡುವುದು); | ಎಲ್ಲಾ ಟೆಂಡರ್‌ದಾರರು ಟೆಂಡರ್‌ಗೆ ಸಂಬಂಧಿಸಿದ ಪೂರ್ವ ಅರ್ಹತಾ ಮಾನದಂಡಗಳನ್ನು ಪೂರೈಸಿಲ್ಲದ ಕಾರಣ ತಾಂತ್ರಿಕ ಪರಿಶೀಲನಾ ಸಮಿತಿಯವರು ಎಲ್ಲಾ ಟೆಂಡರ್‌ದಾರರನ್ನು ಅನರ್ಹಗೊಳಿಸಿದ್ದು ಸದರಿ ಟೆಂಡರ್ ಅನ್ನು ನಿಯಮಾನುಸಾರ ರದ್ದುಗೊಳಿಸಲಾಗಿದ್ದು ಯಾವುದೇ ಕಂಪನಿಗೆ ಸರಬರಾಜು ಆದೇಶ ನೀಡಿರುವುದಿಲ್ಲ. |
| (ಆ) | ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಕಾರ್ಯದರ್ಶಿ ನೇತೃತ್ವದ ಪುನರ್ ಪರಿಶೀಲನಾ ಸಮಿತಿಯ ಮುಂದೆ ಎಷ್ಟು ಕಂಪನಿಗಳ ಪುನರ್ ಪರಿಶೀಲನಾ ಅರ್ಜಿಗಳು ಬಾಕಿ ಇವೆ; ಸದರಿ ಕಂಪನಿಗಳು ಯಾವ ದಿನಾಂಕದಂದು ಅರ್ಜಿ ಸಲ್ಲಿಸಿದ್ದವು; (ಸಮಗ್ರ ವಿವರ ನೀಡುವುದು); | 3. KTTP ACT-1999 ರನ್ವಯ ಯಾವುದೇ ಅರ್ಜಿ ಬಾಕಿ ಇರುವುದಿಲ್ಲ.<br>4. KTTP ACT-1999 ರನ್ವಯ ನಿಗದಿತ ಅವಧಿಯಲ್ಲಿ ಅರ್ಜಿಗಳನ್ನು ವಿಲೇ ಮಾಡಬೇಕಾಗಿರುವ ಕಾರಣ ವಿಲೇ ಮಾಡಲಾಗಿದೆ. |
| (ಇ) | ಹಟ್ಟಿ ಚಿನ್ನದ ಗಣಿಯು 65 ಎಂ ಎಂ ಫೋರ್ಜ್ಡ್ ಗ್ರೈಂಡಿಂಗ್ ಮೀಡಿಯಾ ಬಾಲ್ಸ್ ಸರಬರಾಜಿಗೆ ಎಷ್ಟು ಮೊತ್ತದ ಟೆಂಡರ್ ಕರೆಯಲಾಗಿತ್ತು; ಈ ಅನರ್ಹ ಕಂಪನಿಗಳಿಗೆ ಟೆಂಡರ್ ನಲ್ಲಿ ಅವ್ಯವಹಾರ ನಡೆದಿದೆಯೇ; (ವಿವರ ನೀಡುವುದು) | ಹಟ್ಟಿ ಚಿನ್ನದ ಗಣಿಯು 65 ಎಂ.ಎಂ.ಫೋರ್ಜ್ಡ್ ಸ್ಟೀಲ್ ಗ್ರೈಂಡಿಂಗ್ ಬಾಲ್ಸ್ ಖರೀದಿಗೆ ಅಂದಾಜು ಮೊತ್ತ ರೂ.8.10 ಕೋಟಿಗಳ ಟೆಂಡರ್ ಕರೆಯಲಾಗಿರುತ್ತದೆ.<br>ಪ್ರಶ್ನೆ ಉದ್ಭವಿಸುವುದಿಲ್ಲ. |

| | | |
|---|---|---|
| **(ಈ)** | ಕಾರ್ಯದರ್ಶಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಮುಂದೆ ಇರುವ ಪುನರ್ ಪರಿಶೀಲನಾ ಅರ್ಜಿಗಳನ್ನು ಯಾವ ರೀತಿ ವಿಲೇವಾರಿ ಮಾಡಲಾಗಿದೆ; ( KTTP Act 1999 ರ ಪ್ರತಿ ನೀಡುವುದು) | ಕರ್ನಾಟಕ ಪಾರದರ್ಶಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ರನ್ವಯ ಪುನರ್ ಪರಿಶೀಲನಾ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಕರ್ನಾಟಕ ಪಾರದರ್ಶಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999ರ ಪ್ರತಿಯನ್ನು **ಅನುಬಂಧ-1 ರಲ್ಲಿ** ಒದಗಿಸಿದೆ. |

**ಸಂಖ್ಯೆ:** ಸಿಐ 06 ಸಿಎಂಸಿ 2026

**(ಎಸ್.ಎಸ್. ಮಲ್ಲಿಕಾರ್ಜುನ್)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು

ಅನುಬಂಧ - 1

**ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999**

ಪ್ರಕರಣಗಳ ಕ್ರಮಪಟ್ಟಿ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪ್ರಕರಣಗಳು:

ಅಧ್ಯಾಯ **I**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಉಪಬಂಧಗಳು ಕೆಲವು ಯೋಜನೆಗಳಿಗೆ ಅನ್ವಯವಾಗದಿರುವುದು
4. ಅನ್ವಯಿಸುವಿಕೆಗೆ ಅಪವಾದಗಳು

ಅಧ್ಯಾಯ **II**

ಸಂಗ್ರಹಣದ ನಿಯಂತ್ರಣ

5. ಟೆಂಡರ್ ಮೂಲಕವಲ್ಲದ ಇತರ ಸಂಗ್ರಹಣದ ನಿಷೇಧ
6. ಸಂಗ್ರಹಣ ಸಂಸ್ಥೆಗಳು ಕಾರ್ಯವಿಧಾನವನ್ನು ಅನುಸರಿಸುವುದು

6ಎ. ವಿದ್ಯುನ್ಮಾನ ಹಿಮ್ಮುಖ ಹರಾಜಿನ ಮೂಲಕ ಸಂಗ್ರಹಣೆ

6ಬಿ. ಸರ್ಕಾರಿ ಇ-ಮಾರುಕಟ್ಟೆ ಸ್ಥಳಗಳ (Gem) ಮೂಲಕ ಸಂಗ್ರಹಣೆ

6ಸಿ. ಅತಿ ಸಣ್ಣ ಮತ್ತು ಸಣ್ಣ ಉದ್ದಿಮೆಗಳಿಗೆ ಆದ್ಯತೆಗಳು

7. ಟೆಂಡರ್ ಬುಲೆಟಿನ್ ಅಧಿಕಾರಿಗಳು
8. [XXX]
9. ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಮತ್ತು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ
10. ಟೆಂಡರ್ ಪರಿಶೀಲನಾ ಸಮಿತಿ
11. ಟೆಂಡರ್‌ಗಳನ್ನು ತೆರೆಯುವುದು
12. ಟೆಂಡರ್ ಆಹ್ವಾನಿಸುವ ಪ್ರಾಧಿಕಾರದ ಕರ್ತವ್ಯಗಳು
13. ಟೆಂಡರ್‌ಗಳ ಅಂಗೀಕಾರ
14. ಟೆಂಡರ್‌ಗಳ ಸಾಮಾನ್ಯ ತಿರಸ್ಕರಣೆ

14ಎ. ಟೆಂಡರುದಾರರನ್ನು ಹೊರಹಾಕುವಿಕೆ (Debarment)

15. ನಿರ್ದೇಶನಗಳನ್ನು ನೀಡಲು ಅಧಿಕಾರ
16. ಅಪೀಲು
17. ಮಾಹಿತಿಯನ್ನು ಪಡೆಯುವ ಅಧಿಕಾರ
18. ದಾಖಲೆಗಳನ್ನು ತರಿಸಿಕೊಳ್ಳುವ ಅಧಿಕಾರ

18A. [XXX]

ಅಧ್ಯಾಯ **III**

ಸಂಕೀರ್ಣ

19. ಅಧಿಕಾರಿಗಳನ್ನು ಲೋಕ ನೌಕರರು ಎಂದು ಭಾವಿಸತಕ್ಕದ್ದು
20. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ಪ್ರತಿರಕ್ಷೆ
21. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ
22. ಅಧಿನಿಯಮವು ಇತರ ಕಾನೂನುಗಳ ಮೇಲೆ ಅಧ್ಯಾರೋಹಿ ಪ್ರಭಾವ ಹೊಂದಿರುವುದು
23. ದಂಡನೆ
24. ತೊಂದರೆಗಳನ್ನು ನಿವಾರಿಸಲು ಅಧಿಕಾರ
25. ನಿಯಮ ರಚನಾಧಿಕಾರ
26. ಉಳಿಸುವಿಕೆಗಳು

27. ನಿರಸನ ಮತ್ತು ಉಳಿಸುವಿಕೆಗಳು

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

**I**

**2000ದ ಅಧಿನಿಯಮ ಸಂಖ್ಯೆ 29.**- ಇತ್ತೀಚಿನ ದಿನಗಳಲ್ಲಿ ಟೆಂಡರುಗಳ ಬಗ್ಗೆ ಸಾಕಷ್ಟು ಪ್ರಚಾರ ನೀಡದಿರುವುದರಿಂದ ಟೆಂಡರ್ ದಸ್ತಾವೇಜುಗಳು ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಆಗದಿರುವುದರಿಂದ, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸಾರ್ವಜನಿಕ ವಲಯ ಉದ್ಯಮಗಳಲ್ಲಿ ಹಾಗೂ ಶಾಸನಬದ್ಧ ಮಂಡಲಿ ಮುಂತಾದವುಗಳಲ್ಲಿ, ಟೆಂಡರುಗಳ ಪ್ರಕ್ರಿಯೆಯಲ್ಲಿ ಅಕ್ರಮತೆಗಳು ನಡೆಯುತ್ತಿದೆ, ಇದರಿಂದಾಗಿ ಟೆಂಡರುಗಳ ಮೌಲ್ಯಮಾಪನ ಹಾಗೂ ಅಂಗೀಕಾರಕ್ಕೆ ಸಂಬಂಧಿಸಿದಂತೆ ಪಾರದರ್ಶಕತೆ ಇಲ್ಲದಂತಾಗಿದೆ.

ಅಂಥ ಅಕ್ರಮತೆಗಳು ಮತ್ತೆ ಮತ್ತೆ ನಡೆಯುವುದನ್ನು ತಡೆಯುವುದಕ್ಕಾಗಿ, ಟೆಂಡರ್ ಪ್ರಕ್ರಿಯೆಗಳಲ್ಲಿ ಪಾರದರ್ಶಕತೆಯನ್ನು ತರುವುದಕ್ಕಾಗಿ ಮತ್ತು ಟೆಂಡರುಗಳನ್ನು ಆಹ್ವಾನಿಸುವ ಪ್ರಕ್ರಿಯೆಗೊಳಪಡಿಸುವ ಮತ್ತು ಅಂಗೀಕರಿಸುವ ಕಾರ್ಯವಿಧಾನವನ್ನು ನಿಯಂತ್ರಿಸುವುದಕ್ಕಾಗಿ ಒಂದು ಶಾಸನವನ್ನು ತರಲು ನಿರ್ಧರಿಸಲಾಗಿದೆ ಎಂದು 1997-98ನೇ ಬಜೆಟ್ ಭಾಷಣದಲ್ಲಿ ಸಹ ಘೋಷಿಸಲಾಗಿದೆ.

ಆದುದರಿಂದ ಈ ವಿಧೇಯಕ.

(1999ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 12ರಲ್ಲಿದಂತೆ.)

**II**

**2001ರ ತಿದ್ದುಪಡಿ ಅಧಿನಿಯಮ ಸಂಖ್ಯೆ 21.**- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ 4ನೇ ಪ್ರಕರಣದ (ಇ) ಖಂಡವು, ಐದು ಲಕ್ಷ ರೂಪಾಯಿಗಳನ್ನು ಮೀರದ ಮೌಲ್ಯದ ಸರಕುಗಳ ಅಥವಾ ಸೇವೆಗಳ ಸಂಗ್ರಹಣೆಗೆ ಸಂಬಂಧಪಟ್ಟಂತೆ ಸರ್ಕಾರದ ಇಲಾಖೆಗಳಿಗೆ ಮತ್ತು ಕಿರುನೀರು ಸರಬರಾಜು ಯೋಜನೆಯ ಅನುಷ್ಠಾನದ ಮತ್ತು ಶಾಲಾ ಕೊಠಡಿಗಳ ನಿರ್ಮಾಣದ ಸಂದರ್ಭದಲ್ಲಿ ಸಂಗ್ರಹಣೆಯ ಮೌಲ್ಯವು ಎರಡು ಲಕ್ಷ ರೂಪಾಯಿಗಳನ್ನು ಮೀರದಂತಹ ಸಂದರ್ಭದಲ್ಲಿ ಸ್ಥಳೀಯ ಪ್ರಾಧಿಕಾರಗಳಿಗೆ ಮತ್ತು ಸಂಗ್ರಹಣೆಯ ಮೌಲ್ಯವು ಒಂದು ಲಕ್ಷ ರೂಪಾಯಿಗಳನ್ನು ಮೀರದಿರುವ ಯಾವುದೇ ಇತರೆ ಸಂದರ್ಭಗಳಲ್ಲಿ ಈ ಅಧಿನಿಯಮದ ಔಔನೇ ಅಧ್ಯಾಯವು ಅನ್ವಯವಾಗುವುದನ್ನು ಹೊರತುಪಡಿಸಲಾಗಿದೆ.

ದರಗಳಲ್ಲಿನ ಏರಿಕೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರದ ಇಲಾಖೆಗಳಿಗೆ ಸಂಬಂಧಪಟ್ಟಂತೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳು ಮುಂತಾದವುಗಳ ಸಂದರ್ಭದಲ್ಲಿ ಸರಕುಗಳ ಮತ್ತು ಸೇವೆಗಳ ಸಂಗ್ರಹಣೆಗೆ ಸಂಬಂಧಪಟ್ಟಂತೆ ಏಕರೂಪದ ಮಿತಿಯನ್ನು ತರುವುದು ಅವಶ್ಯಕವೆಂದು ಭಾವಿಸಲಾಯಿತು.

ಆದ್ದರಿಂದ ಈ ವಿಧೇಯಕ.

**III**

**2003ರ ತಿದ್ದುಪಡಿ ಅಧಿನಿಯಮ ಸಂಖ್ಯೆ 4.**- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ (2000ದ ಕರ್ನಾಟಕ ಅಧಿನಿಯಮ 29) 4ನೇ ಪ್ರಕರಣದ (ಡಿ) ಖಂಡವು, ಸರ್ಕಾರಿ ಇಲಾಖೆಗಳ, ಸಾರ್ವಜನಿಕ ವಲಯ ಉದ್ಯಮಗಳ, ಮಂಡಳಿಗಳ, ನಿಗಮಗಳ ಮತ್ತು ಸರ್ಕಾರವು ನಿರ್ದಿಷ್ಟಪಡಿಸಿದ ಅಂಥ ಇತರ ಸಂಸ್ಥೆಗಳ ಸಂಬಂಧದಲ್ಲಿ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಗಾಗಿ, ಅಧಿನಿಯಮದ ಅನ್ವಯಿಸುವಿಕೆಯಿಂದ ವಿನಾಯಿತಿಗೊಳಿಸುವುದಕ್ಕಾಗಿ ಉಪಬಂಧ ಕಲ್ಪಿಸುತ್ತದೆ. ಈಗ ಇರುವ ಎರಡು ವರ್ಷಗಳ ವಿನಾಯಿತಿ ಅವಧಿಯನ್ನು ಮೂರು ವರ್ಷಗಳಿಗೆ ವಿಸ್ತರಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2003ರ ವಿಧಾನಸಭೆಯ ವಿಧೇಯಕ ಸಂಖ್ಯೆ 3)

(ಭಾರತ ಸಂವಿಧಾನದ ಏಳನೇ ಅನುಸೂಚಿಯ ಎರಡನೇ ಪಟ್ಟಿಯ 5ನೇ ನಮೂದು ಹಾಗೂ ಮೂರನೇ ಪಟ್ಟಿಯ 12ನೇ ನಮೂದು)

**IV**

**2007ರ ತಿದ್ದುಪಡಿ ಅಧಿನಿಯಮ ಸಂಖ್ಯೆ 13:** ಸಾರ್ವಜನಿಕ ಸಂಗ್ರಹಣೆಗಳಲ್ಲಿ ಅತ್ಯುತ್ತಮ ಪದ್ಧತಿಗಳನ್ನು ಜಾರಿಗೆ ತರಲು ಇ-ಸಂಗ್ರಹಣೆ ಹಾಗೂ ಇ-ಸಂಗ್ರಹಣಾ ವೇದಿಕೆಯ ವ್ಯವಸ್ಥೆ ಪ್ರಾರಂಭಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಬೇಡಿಕೆಗಳನ್ನು ಒಟ್ಟುಗೂಡಿಸಲು, ಬೆಲೆ ಪಟ್ಟಿಯ ಖರ್ಚನ್ನು ಕಡಿಮೆ ಮಾಡಲು, ಸ್ಥಿರವಾದ ಸಂಗ್ರಹಣಾ ವಿಧಾನವನ್ನು ರೂಢಿಗೆ ತರಲು ಮತ್ತು ಪಾರದರ್ಶಕತೆಯನ್ನು ಉಂಟು ಮಾಡಲು ಇ-ಸಂಗ್ರಹಣೆ ವಿಧಾನವು ಉಪಯುಕ್ತವಾಗುವುದು.

ಆದ್ದರಿಂದ ಈ ವಿಧೇಯಕ.

[2007ರ ವಿಧಾನಸಭೆಯ ವಿಧೇಯಕ ಸಂಖ್ಯೆ:12]

[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 35ನೇ ನಮೂದನೆ ಹಾಗೂ 3ನೇ ಪಟ್ಟಿಯ 7 ಮತ್ತು 12ನೇ ನಮೂದನೆಗಳ ಅಡಿಯಲ್ಲಿ ಬರುತ್ತದೆ.]

V

**2015ರ ತಿದ್ದುಪಡಿ ಅಧಿನಿಯಮ ಸಂಖ್ಯೆ 20.–** ಐದು ಲಕ್ಷ ರೂಪಾಯಿಗಳಿಗೆ ಮೀರದ ಮೌಲ್ಯದ ಕುಡಿಯುವ ನೀರಿನ ಸ್ಕೀಮುಗಳ ವಿದ್ಯುದೀಕರಣ ಮೂಲ ಸೌಲಭ್ಯ ಕಾಮಗಾರಿಗಳಿಗಾಗಿ ರಾಜ್ಯದ ಸಂಚಿತ ನಿಧಿಯಿಂದ ಅನುದಾನವನ್ನು ಸ್ವೀಕರಿಸುವ ಸಂಗ್ರಹಣಾ ಘಟಕದ ಮೂಲಕ ಸಂಗ್ರಹಣೆಯನ್ನು ಮಾಡಲಾಗಿದ್ದ ಸಂದರ್ಭದಲ್ಲಿ, ಅದನ್ನು ಅಧಿನಿಯಮದ ಅಧ್ಯಾಯ-ಖಖ ರ ಉಪಬಂಧಗಳ ಅನ್ವಯಿಕೆಯಿಂದ ವಿನಾಯಿತಿಗೊಳಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ 01:, ಕಡತ ಸಂಖ್ಯೆ:ಸಂವ್ಯಶಾಇ 40 ಶಾಸನ 2014)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 17 ಮತ್ತು 35ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

**VI**

**2017ರ ತಿದ್ದುಪಡಿ ಅಧಿನಿಯಮ ಸಂಖ್ಯೆ 31.–**ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳ ಸಮುದಾಯದಲ್ಲಿರುವ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಮತ್ತು 50 ಲಕ್ಷ ರೂಪಾಯಿಗಳವರೆಗಿನ ಒಟ್ಟು ಸರ್ಕಾರಿ ಕಾಮಗಾರಿ ಕೆಲಸಗಳ ಪೈಕಿ ಅಂಥ ಕಾಮಗಾರಿಗಳ ಸಂಖ್ಯೆಯ ಶೇಕಡ 17.15ರಷ್ಟನ್ನು ಮೀರದಂತೆ ಅನುಸೂಚಿತ ಜಾತಿಗಳ ವರ್ಗಕ್ಕೆ ಸೇರಿದವರಿಗೆ ಹಾಗೂ ಶೇಕಡ 6.95ರಷ್ಟನ್ನು ಮೀರದಂತೆ ಅನುಸೂಚಿತ ಪಂಗಡಗಳ ವರ್ಗಕ್ಕೆ ಸೇರಿದವರಿಗೆ ಪಾಲ್ಗೊಳ್ಳುವುದನ್ನು ಪ್ರೋತ್ಸಾಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು (2000ರ ಕರ್ನಾಟಕ ಅಧಿನಿಯಮ 28) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ 19: ಕಡತ ಸಂಖ್ಯೆ:ಸಂವ್ಯಶಾಇ 22 ಶಾಸನ 2016)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 7ನೇ ನಮೂದನೆ ಹಾಗೂ 3ನೇ ಪಟ್ಟಿಯ 7ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

– –

**VII**

**2019ರ ತಿದ್ದುಪಡಿ ಅಧಿನಿಯಮ ಸಂಖ್ಯೆ 06.–**ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು (2000ರ ಕರ್ನಾಟಕ ಅಧಿನಿಯಮ 29) ಈ ಮುಂದಿನವುಗಳಿಗಾಗಿ, ಎಂದರೆ:–

(i) ಇ–ಸಂಗ್ರಹಣೆ, ಟೆಂಡರ್ ಬುಲೆಟಿನ್ ಮತ್ತು ಟೆಂಡರ್ ಬುಲೆಟಿನ್ ಅಧಿಕಾರಿಗೆ ಸಂಬಂಧಿಸಿದ ಉಪಬಂಧಗಳನ್ನು ಬಿಟ್ಟುಬಿಡುವುದಕ್ಕೆ; ಮತ್ತು ಸಾರ್ವಜನಿಕರಿಗೆ ಸುಲಭವಾಗಿ ಲಭ್ಯವಾಗಲು ರಾಜ್ಯ ಸಾರ್ವಜನಿಕ ಸಂಗ್ರಹಣೆಗಳ ಇ–ಪೋರ್ಟಲ್‌ನ್ನು ಸ್ಥಾಪಿಸುವುದಕ್ಕೆ ಮತ್ತು ನಿರ್ವಹಿಸುವುದಕ್ಕೆ;

(ii) 'ಟೆಂಡರ್' ಮತ್ತು 'ಟೆಂಡರ್ ದಸ್ತಾವೇಜು' ಎಂಬ ಪದಗಳನ್ನು ಮರು ಪರಿಭಾಷಿಸುವುದಕ್ಕೆ;

(iii) 4(ಡಿ) ಪ್ರಕರಣದ ಅಡಿಯಲ್ಲಿ ಸರ್ಕಾರದ ಕೆಲವು ಇಲಾಖೆಗಳಿಂದ, ಸಾರ್ವಜನಿಕ ಉದ್ದಿಮೆಗಳಿಂದ, ಶಾಸನಬದ್ಧ ಮಂಡಳಿಗಳಿಂದ ಸಂಗ್ರಹವಾಗುವ ಸರಕುಗಳು ಅಥವಾ ಸೇವೆಗಳಿಗೆ ಅನ್ವಯವಾಗುವ ಕೆಲವು ಅಪವಾದಗಳನ್ನು ಬಿಟ್ಟುಬಿಡುವುದಕ್ಕೆ; ಮತ್ತು

(iv) ಸರ್ಕಾರಿ–ಇ–ಮಾರುಕಟ್ಟೆ ಸ್ಥಳಗಳ (ಜಿಇಎಂ) ಮೂಲಕ ಸಂಗ್ರಹಣೆ ಮಾಡುವುದಕ್ಕೆ;

(v) ವಿದ್ಯುನ್ಮಾನ ಹಿಮ್ಮುಖ ಹರಾಜಿನ ಮೂಲಕ ಸಂಗ್ರಹಣೆಗೆ ಉಪಬಂಧವನ್ನು ಕಲ್ಪಿಸುವುದಕ್ಕೆ;

(vi) ಕರಾರು ನಿರ್ವಹಣಾ ವ್ಯವಸ್ಥಾಪನೆಯನ್ನು ಅಳವಡಿಸುವುದಕ್ಕೆ;

(vii) ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಭಿವೃದ್ಧಿ ಅಧಿನಿಯಮ, 2006ರ ಅನುಸಾರವಾಗಿ ಅತಿ ಸಣ್ಣ ಮತ್ತು ಸಣ್ಣ ಉದ್ದಿಮೆಗಳಿಗೆ ಆದ್ಯತೆಯನ್ನು ನೀಡುವುದಕ್ಕೆ;

(viii) ಟೆಂಡರುದಾರರನ್ನು ಹೊರಹಾಕುವುದಕ್ಕೆ; ಹಾಗೂ

– ಕೆಲವು ಆನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ತರುವುದಕ್ಕೆ ಕೂಡಾ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2018ರ ವಿಧಾನಸಭೆಯ ವಿಧೇಯಕ ಸಂಖ್ಯೆ 10, ಕಡತ ಸಂಖ್ಯೆ:ಸಂವ್ಯಶಾಇ 13 ಶಾಸನ 2017]

[ಭಾರತ ಸಂವಿಧಾನದ 7ನೇ ಅನುಸೂಚಿಯ 2 ಪಟ್ಟಿಯ 5 ಮತ್ತು 35 ನಮೂದನೆಯಡಿಯಲ್ಲಿ ಮತ್ತು 3ನೇ ಪಟ್ಟಿಯ 7ನೇ ನಮೂದನೆಯಡಿಯಲ್ಲಿ ಬರುತ್ತದೆ.]

## VIII

**2020ರ ತಿದ್ದುಪಡಿ ಅಧಿನಿಯಮ ಸಂಖ್ಯೆ 12.–**ಈ ಅಧಿನಿಯಮದ ಉಪಬಂಧಗಳ ಅನ್ವಯಿಸುವಿಕೆಗಾಗಿ ಸರಕುಗಳು ಮತ್ತು ಸೇವೆಗಳ ಸಂಗ್ರಹಣಾ ಮೌಲ್ಯಕ್ಕಾಗಿನ ಮಿತಿಯನ್ನು ಒಂದು ಲಕ್ಷ ರೂಪಾಯಿಗಳಿಂದ ಐದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು (2000ರ ಕರ್ನಾಟಕ ಅಧಿನಿಯಮ 29) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2020ರ ವಿಧಾನಸಭೆಯ ವಿಧೇಯಕ ಸಂಖ್ಯೆ:06, ಕಡತ ಸಂಖ್ಯೆ: ಸಂವ್ಯಶಾಇ 25 ಶಾಸನ 2019]

[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5 ಮತ್ತು 35 ನಮೂದನೆಯಡಿಯಲ್ಲಿ ಹಾಗೂ 3ನೇ ಪಟ್ಟಿಯ 7ನೆಯ ನಮೂದನೆಯಡಿಯಲ್ಲಿ ಬರುತ್ತದೆ]

[ಕರ್ನಾಟಕ ರಾಜ್ಯ ಪತ್ರದ ಭಾಗ– ವಿಶೇಷ ಪತ್ರಿಕೆ ಸಂಖ್ಯೆ: 150 ದಿನಾಂಕ: 27.04.2020ರಲ್ಲಿ ಪ್ರಕಟಣೆಗೊಂಡಿದೆ]

## IX

**2021ರ ತಿದ್ದುಪಡಿ ಅಧಿನಿಯಮ ಸಂಖ್ಯೆ 19.-** ಯಾವುದೇ ಸಂಗ್ರಹಣಾ ಸಂಸ್ಥೆಯು ಕರ್ನಾಟಕ ಗಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತಕ್ಕೆ ವಹಿಸಿಕೊಟ್ಟ ರೂ.2ಕೋಟಿಗಳಿಗೆ ಮೀರದಿರುವ ಎಲ್ಲಾ ವಿಧದ ನಿರ್ಮಾಣ ಕಾಮಗಾರಿಗಳಿಗೆ ವಿನಾಯಿತಿ ನೀಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ಕ್ಕೆ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಕೆಲವು ಆನುಷಂಗಿಕ ಹಾಗೂ ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

[2021ರ ವಿಧಾನಸಭೆಯ ವಿಧೇಯಕ ಸಂಖ್ಯೆ: 19, ಕಡತ ಸಂಖ್ಯೆ: ಸಂವ್ಯಶಾಇ 17 ಶಾಸನ 2021]

[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5 ಮತ್ತು 35ನೇ ನಮೂದು ಹಾಗೂ 3ನೇ ಪಟ್ಟಿಯ 7ನೇ ನಮೂದನೆಯಡಿಯಲ್ಲಿ ಬರುತ್ತದೆ]

[ಕರ್ನಾಟಕ ರಾಜ್ಯ ಪತ್ರದ ಭಾಗ-IVA. ವಿಶೇಷ ಪತ್ರಿಕೆ ಸಂಖ್ಯೆ: 404 ದಿನಾಂಕ: 06.04.2021ರಲ್ಲಿ ಪ್ರಕಟಣೆಗೊಂಡಿದೆ]

## 2000ರ ಕರ್ನಾಟಕ ಅಧಿನಿಯಮ ಸಂಖ್ಯೆ 29

(2000ರ ಡಿಸೆಂಬರ್ 13ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999.

(2000ರ ಡಿಸೆಂಬರ್ 10ನೇ ದಿನಾಂಕದಂದು ಕರ್ನಾಟಕ ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

(2001ರ 21, 2003ರ 4, 2007ರ 13, 2015ರ 20, 2017ರ 31, 2019ರ 6, 2020ರ 12 ಮತ್ತು 2021ರ 19ನೇ ಅಧಿನಿಯಮಗಳಲ್ಲಿ ತಿದ್ದುಪಡಿಯಾದಂತೆ)

ಸಂಗ್ರಹಣಾ ಸಂಸ್ಥೆಗಳು, ಟೆಂಡರ್‌ಗಳನ್ನು ಆಹ್ವಾನಿಸುವ, ಪ್ರಕ್ರಿಯೆಗೊಳಪಡಿಸುವ ಮತ್ತು ಅಂಗೀಕರಿಸುವ [1][ಹಾಗೂ ಕರಾರು ನಿರ್ವಹಣಾ ವ್ಯವಸ್ಥಾಪನೆಯನ್ನು ಒಳಗೊಳ್ಳುವ][1] ಕಾರ್ಯವಿಧಾನವನ್ನು ಸರಳಗೊಳಿಸುವ ಮೂಲಕ ಸರಕುಗಳ ಮತ್ತು ಸೇವೆಗಳ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಟೆಂಡರುಗಳನ್ನು ಆಹ್ವಾನಿಸುವ, ಪ್ರಕ್ರಿಯೆಗೊಳಪಡಿಸುವ ಮತ್ತು ಅಂಗೀಕರಿಸುವ [1][ಹಾಗೂ ಕರಾರು ನಿರ್ವಹಣಾ ವ್ಯವಸ್ಥಾಪನೆಯನ್ನು ಒಳಗೊಳ್ಳುವ][1] ಕಾರ್ಯವಿಧಾನವನ್ನು ಸರಳಗೊಳಿಸುವ ಮೂಲಕ ಸಂಗ್ರಹಣಾ ಸಂಸ್ಥೆಗಳು ಸರಕುಗಳ ಮತ್ತು ಸೇವೆಗಳ ಸಂಗ್ರಹಣಾ ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. 2019 ಅಧಿನಿಯಮ 06ರ ಮೂಲಕ 24.01.2019ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ

### ಅಧ್ಯಾಯ I

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ಎಂದು ಕರೆಯತಕ್ಕದ್ದು.

(2) ಇದು 2000ದ ಅಕ್ಟೋಬರ್ ನಾಲ್ಕನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ನಿರ್ಮಾಣ ಕಾಮಗಾರಿಗಳು" ಎಂದರೆ, ಉಕ್ಕಿನ ರಚನೆಗಳ ನಿರ್ಮಾಣ ಮತ್ತು ಎಲ್ಲಾ ಇತರ ಸಿವಿಲ್ ಕಾಮಗಾರಿಗಳು ಸೇರಿದಂತೆ, ಕಟ್ಟಡಗಳ, ರಸ್ತೆಗಳ, ಸೇತುವೆಗಳ ಅಥವಾ ಇತರ ರಚನೆಗಳ ನಿರ್ಮಾಣ, ಕೆಡವಿ ಹಾಕುವುದು, ದುರಸ್ತಿ ಅಥವಾ ಜೀರ್ಣೋದ್ಧಾರ;

[2][[1][ (ಎಎ) 'ಕರಾರು ನಿರ್ವಹಣಾ ವ್ಯವಸ್ಥಾಪನೆ' ಎಂದರೆ, ಆಯ್ಕೆಗೊಂಡ ಬಿಡ್ಡುದಾರನಿಗೆ ಅಂತಿಮ ಒಪ್ಪಿಗೆ ಪತ್ರವನ್ನು ನೀಡಿದ ತರುವಾಯ ನಿರ್ಮಾಣ ಕಾಮಗಾರಿಗಳು, ಸರಕುಗಳು ಮತ್ತು ಸೇವೆಗಳಿಗಾಗಿ ಸಂಗ್ರಹಣಾ ಸಂಸ್ಥೆಯ ಮೂಲಕ ಕೈಗೊಂಡ ಚಟುವಟಿಕೆಗಳನ್ನು ಒಳಗೊಳ್ಳುವುದು, ಆದರೆ ಮೈಲಿಗಲ್ಲುಗಳ ಮತ್ತು ಚಟುವಟಿಕೆಗಳ ಸೃಜನೆ, ವಿತರಣಾ ಅನುಸೂಚಿಗಳ (delivery schedules) ಸೃಜನೆ, ಮಾಪನ, ತಪಾಸಣೆ, ಬಿಲ್ಲುಗಳ ಪ್ರಕ್ರಿಯೆ, ಪರಿವರ್ತನೆ ಆದೇಶಗಳ (variation orders) ಸೃಜನೆ ಮತ್ತು ಪಾವತಿ ಇವುಗಳಿಗೆ ಮಾತ್ರ ಸೀಮಿತವಾಗಿರತಕ್ಕದ್ದಲ್ಲ.][2]

[2][(ಎಬಿ) 'ವಿದ್ಯುನ್ಮಾನ ಹಿಮ್ಮುಖ ಹರಾಜು' ಎಂದರೆ, ನಿಯಮಿಸಿದ ಕಾಲಾವಧಿಯಲ್ಲಿ ತಾಂತ್ರಿಕವಾಗಿ ಅರ್ಹರಾದ ಬಿಡ್ಡುದಾರರು ಸಲ್ಲಿಸಿರುವ ಯಶಸ್ವಿಯಾದ ಕಡಿಮೆ ಬೆಲೆಯ ಬಿಡ್ಡುಗಳನ್ನು (lowered bids) ಮತ್ತು ಸ್ವಯಂಚಾಲಿತ ಮೌಲ್ಯನಿರ್ಧರಣೆಯ ಬಿಡ್ಡುಗಳನ್ನು ಒಳಗೊಂಡಿರುವ ಬಿಡ್ಡುಗಳ ಪೈಕಿ ಯಶಸ್ವಿ ಬಿಡ್ಡನ್ನು ಆಯ್ಕೆ ಮಾಡಲು ಸಂಗ್ರಹಣಾ ಸಂಸ್ಥೆಯು ಬಳಸುವ ಆನ್‌ಲೈನ್ ನಿಜಾವಧಿಯ (real-time) ಸಂಗ್ರಹಣಾ ತಂತ್ರಜ್ಞಾನ;][2]][1]

1. ಉಪಖಂಡ (ಎಎ) ಮತ್ತು (ಎಎಎ)ಗಳನ್ನು 2007ರ ಅಧಿನಿಯಮ ಸಂಖ್ಯೆ.13ರ ಮೂಲಕ ದಿನಾಂಕ:27.11.2006 ರಿಂದ ಸೇರಿಸಲಾಗಿದೆ.

(ಬಿ) "ಸರಕುಗಳು" ಎಂದರೆ, ಸಾರ್ವಜನಿಕ ಸಂಸ್ಥೆಗೆ ಅದರ ಸಾರ್ವಜನಿಕ ಕರ್ತವ್ಯ ನಿರ್ವಹಣೆಯಲ್ಲಿ ಬಳಕೆ, ಉಪಯೋಗ ಅಥವಾ ವಿತರಣೆಗಾಗಿ ಅಗತ್ಯವಾದ ಯಂತ್ರೋಪಕರಣಗಳು, ಮೋಟಾರು ವಾಹನಗಳು, ಸಲಕರಣೆಗಳು, ಪೀಠೋಪಕರಣಗಳು, ಲೇಖನ ಸಾಮಗ್ರಿಗಳು, ಜವಳಿ ಕಚ್ಚಾ ಸಾಮಗ್ರಿಗಳು, ಔಷಧ ವಸ್ತುಗಳು, ವೈಜ್ಞಾನಿಕ ಉಪಕರಣಗಳು, ರಾಸಾಯನಿಕಗಳು, ಆಹಾರ ಧಾನ್ಯಗಳು, ಎಣ್ಣೆ ಹಾಗೂ ಎಣ್ಣೆ ಬೀಜಗಳು ಅಥವಾ ಇತರ ವ್ಯಾಪಾರ ಸರಕುಗಳು ;

(ಸಿ) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ ;

[2][(ಸಿಎ) 'ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್' ಎಂದರೆ, ಅನುಕೂಲ ಜೋಡಣೆಯನ್ನು (customization) ಅಳವಡಿಸಿಕೊಳ್ಳುವ ಮೂಲಕ ಸಮಗ್ರ ಅಧಿಕಾರವನ್ನು ನೀಡಿ ಸಂಗ್ರಹಣಾ ಸಾಧನಗಳ ಮೂಲಕ ರಾಜ್ಯಸರ್ಕಾರವು ಸ್ಥಾಪಿಸಿದ ಮತ್ತು ನಿರ್ವಹಿಸುತ್ತಿರುವ ಸಂಗ್ರಹಣಾ ಪ್ರಕ್ರಿಯೆಯನ್ನು ಒಳಗೊಂಡ ವಿದ್ಯುನ್ಮಾನ ಮಾಧ್ಯಮದ ಒಂದು ಸಂಗ್ರಹಣಾ ವೇದಿಕೆ.][2]

(ಡಿ) "ಸಂಗ್ರಹಣಾ ಸಂಸ್ಥೆ" ಎಂದರೆ, ಯಾವುದೇ ಸರ್ಕಾರಿ ಇಲಾಖೆ, ಒಂದು ರಾಜ್ಯ ಸರ್ಕಾರಿ ಉದ್ಯಮ, ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಕಾನೂನಿನ ಮೂಲಕ ಅಥವಾ ಅಡಿಯಲ್ಲಿ ಸ್ಥಾಪಿತವಾದ ಮತ್ತು ಸರ್ಕಾರದ ಸ್ವಾಮ್ಯದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಮಂಡಲಿ, ನಿಕಾಯ ಅಥವಾ ನಿಗಮ ಮತ್ತು ಸರ್ಕಾರದ ಸ್ವಾಮ್ಯದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಮತ್ತು ಅದು ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ನಿಕಾಯ ಅಥವಾ ಪ್ರಾಧಿಕಾರ ;

(ಇ) "ಸಾರ್ವಜನಿಕ ಸಂಗ್ರಹಣೆ" ಅಥವಾ "ಸಂಗ್ರಹಣೆ" ಎಂದರೆ, ಸಂಗ್ರಹಣಾ ಸಂಸ್ಥೆಗಳು ಮಾಡುವ ಸರಕುಗಳ ಖರೀದಿ, ಪಡೆದುಕೊಳ್ಳುವ ಸೇವೆಗಳು ಅಥವಾ ನಿರ್ವಹಿಸುವ ನಿರ್ಮಾಣ ಕಾಮಗಾರಿಗಳು ;

(ಎಫ್) "ಸೇವೆಗಳು" ಎಂದರೆ, ಸಂಗ್ರಹಣಾ ಸಂಸ್ಥೆಯ ಸಾರ್ವಜನಿಕ ಕರ್ತವ್ಯ ನಿರ್ವಹಣೆಯಲ್ಲಿ ಅದಕ್ಕೆ ಸೇವೆ ಸಲ್ಲಿಸುವ, ಅದರ ಸೇವೆಯಲ್ಲಿ ನಿರತವಾಗಿರುವ, ಅದಕ್ಕೆ ಸಹಾಯ ಮಾಡುವ ಅಥವಾ ಪ್ರಯೋಜನವಾಗುವಂತೆ ಮಾಡುವ ಕಾರ್ಯ ಮತ್ತು ಇವುಗಳಲ್ಲಿ ನಿರ್ಮಾಣ ಕಾಮಗಾರಿಗಳೂ ಒಳಗೊಳ್ಳುತ್ತವೆ.

(ಜಿ) "ನಿರ್ದಿಷ್ಟ ಸರಕುಗಳು ಅಥವಾ ಸೇವೆಗಳು" ಎಂದರೆ, ಟೆಂಡರಿನಲ್ಲಿ ನಿರ್ದಿಷ್ಟಪಡಿಸಲಾದ ಮತ್ತು ಸಂಗ್ರಹಣಾ ಸಂಸ್ಥೆಯ ಪರವಾಗಿ ಟೆಂಡರನ್ನು ಅಂಗೀಕರಿಸಿರುವುದರಿಂದಾಗಿ ಕರಾರಿನಲ್ಲಿ ಗುರುತಿಸಲಾದ, ಸಂದರ್ಭಾನುಸಾರ ಸರಕುಗಳು ಅಥವಾ ಸೇವೆಗಳು;

[2][(ಹೆಚ್) "ಟೆಂಡರ್" ಎಂದರೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಿ ಪ್ರಕಟಿಸಿದುದಕ್ಕೆ ಉತ್ತರವಾಗಿ ವಿದ್ಯುನ್ಮಾನ ಹಿಮ್ಮುಖ ಹರಾಜುಗಳ ಮೂಲಕ ಮಾಡಿದ ಟೆಂಡರುಗಳನ್ನು ಒಳಗೊಂಡಂತೆ ಸರಕುಗಳು ಅಥವಾ ಸೇವೆಗಳ ಸರಬರಾಜು ಅಥವಾ ನಿರ್ಮಾಣ ಕಾಮಗಾರಿಗಳಿಗಾಗಿ ಮಾಡಿದ ವಾಡಿಕೆಯ ಬೆಲೆ ಹೇಳುವಿಕೆ (offer);][2]

(ಐ) "ಟೆಂಡರನ್ನು ಅಂಗೀಕರಿಸುವ ಪ್ರಾಧಿಕಾರ" ಎಂದರೆ, ಟೆಂಡರನ್ನು ಅಂಗೀಕರಿಸುವುದಕ್ಕಾಗಿ ನೇಮಕಗೊಂಡ ಒಬ್ಬ ಅಧಿಕಾರಿ ಅಥವಾ ಒಂದು ಸಮಿತಿ ಮತ್ತು "ಟೆಂಡರ್ ಆಹ್ವಾನಿಸುವ ಪ್ರಾಧಿಕಾರ" ಎಂದರೆ, ಟೆಂಡರನ್ನು ಆಹ್ವಾನಿಸಲು 9ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಒಬ್ಬ ಅಧಿಕಾರಿ ಅಥವಾ ಒಂದು ಸಮಿತಿ ;

(ಜೆ) [3][XXX][3]

(ಕೆ) [3][XXX][3]

[2][(ಎಲ್) "ಟೆಂಡರ್ ದಸ್ತಾವೇಜು" ಎಂದರೆ, ಕಾಮಗಾರಿಗಳ ವೇಳಾಪಟ್ಟಿ, ಘಟನೆಗಳ ಕಾಲಕ್ರಮ ಪಟ್ಟಿ, ಸರಕುಗಳು ಮತ್ತು ಸೇವೆಗಳ ಅಗತ್ಯತೆ, ತಾಂತ್ರಿಕ ನಿರ್ದಿಷ್ಟ ವಿವರಣೆಗಳು, ಸಂಗ್ರಹಣಾ ಮಾನದಂಡಗಳು ಮತ್ತು ಟೆಂಡರುಗಳ ಮೌಲ್ಯಮಾಪನ ಮತ್ತು ತುಲನೆಗಾಗಿ ನಿಯಮಿಸಬಹುದಾದ ಅಂಥ ಇತರ ವಿವರಗಳನ್ನು ವಿವರಿಸುವ ವಿದ್ಯುನ್ಮಾನ ರೂಪದಲ್ಲಿರುವುದನ್ನೂ ಒಳಗೊಂಡಂತೆ ದಸ್ತಾವೇಜಿನ ಸಮೂಹ;][2]

[1][ಪರಂತು, ಇ-ಸಂಗ್ರಹಣೆಯ ಉದ್ದೇಶಕ್ಕಾಗಿ "ಟೆಂಡರ್ ಕಾಗದ ಪತ್ರಗಳು" ಎಂದರೆ, ವಿದ್ಯುನ್ಮಾನ ನಮೂನೆ ರೂಪದಲ್ಲಿರುವ ದಸ್ತಾವೇಜುಗಳ ಸೆಟ್.][1]

1. 2007ರ ಅಧಿನಿಯಮ ಸಂಖ್ಯೆ13ರ ಮೂಲಕ ದಿನಾಂಕ:27.11.2006 ರಿಂದ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು.
2. 2019 ಅಧಿನಿಯಮ 06ರ ಮೂಲಕ 24.01.2019ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2019 ಅಧಿನಿಯಮ 06ರ ಮೂಲಕ 24.01.2019ರಿಂದ ಜಾರಿಗೆ ಬರುವಂತೆ ಬಿಟ್ಟು ಬಿಡಲಾಗಿದೆ.

**3. ಉಪಬಂಧಗಳು ಕೆಲವು ಯೋಜನೆಗಳಿಗೆ ಅನ್ವಯವಾಗದಿರುವುದು.-** ಈ ಅಧಿನಿಯಮದ ಉಪಬಂಧಗಳು, ಅಂತರ್‌ರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಹಣಕಾಸನ್ನು ಪಡೆಯುವ ಯೋಜನೆಗಳ ಅಥವಾ ಅಂತರ್‌ರಾಷ್ಟ್ರೀಯ ಒಪ್ಪಂದಗಳ ಅಡಿಯಲ್ಲಿ ಬರುವ ಯೋಜನೆಗಳ ಸಂಬಂಧದಲ್ಲಿ ನಿರ್ದಿಷ್ಟಪಡಿಸಲಾದ ಕಾರ್ಯವಿಧಾನಕ್ಕೆ ಅಸಂಗತವಾಗಿರುವಷ್ಟರಮಟ್ಟಿಗೆ, ಅಂಥ ಯೋಜನೆಗಳಿಗಾಗಿನ ಸರಕುಗಳ ಅಥವಾ ಸೇವೆಗಳ ಸಂಗ್ರಹಣೆಗೆ ಅನ್ವಯವಾಗತಕ್ಕದ್ದಲ್ಲ.

**4. ಅನ್ವಯಿಸುವಿಕೆಗೆ ಅಪವಾದಗಳು.**– ಅಧ್ಯಾಯ IIರ ಉಪಬಂಧಗಳು,–

(ಎ) ಪ್ರಕೃತಿ ವಿಕೋಪಗಳ ಅಥವಾ ಸರ್ಕಾರವು ಘೋಷಿಸಿದ ತುರ್ತುಪರಿಸ್ಥಿತಿಯ ಅವಧಿಯಲ್ಲಿ;

(ಬಿ) ಸರಕುಗಳು ಅಥವಾ ಸೇವೆಗಳು ಏಕೈಕ ಮೂಲದಿಂದ ಲಭ್ಯವಾಗುತ್ತಿದ್ದಲ್ಲಿ ಅಥವಾ ಒಬ್ಬ ನಿರ್ದಿಷ್ಟ ಸರಬರಾಜುದಾರನು ಅಥವಾ ಕರಾರುದಾರನು, ಸರಕುಗಳ ಅಥವಾ ಸೇವೆಗಳ ಅಥವಾ ನಿರ್ಮಾಣ ಕಾಮಗಾರಿಗಳ ಸಂಬಂಧದಲ್ಲಿ ಸಂಪೂರ್ಣ ಹಕ್ಕುಗಳನ್ನು ಹೊಂದಿದ್ದಲ್ಲಿ ಮತ್ತು ಸೂಕ್ತ ಪರ್ಯಾಯಗಳು ಅಥವಾ ಬದಲಿ ವ್ಯವಸ್ಥೆಗಳು ಇರದಿದ್ದಲ್ಲಿ:

ಪರಂತು, ಈ ಖಂಡದ ಉದ್ದೇಶಕ್ಕಾಗಿ, ಸಂಗ್ರಹಣಾ ಸಂಸ್ಥೆಯ ಒಬ್ಬರು ತಾಂತ್ರಿಕ ಪ್ರತಿನಿಧಿ, ಅದೇ ಬಗೆಯ ಸಂಗ್ರಹಣಾ ಕಾರ್ಯವನ್ನು ನಡೆಸುತ್ತಿರುವ ಸರ್ಕಾರಿ ಸಂಸ್ಥೆಯ ಒಬ್ಬರು ತಾಂತ್ರಿಕ ಪ್ರತಿನಿಧಿ ಮತ್ತು ಸರಕುಗಳು ಅಥವಾ ಸೇವೆಗಳ ಏಕೈಕ ಮೂಲದಿಂದ ಲಭ್ಯವಾಗುತ್ತವೆ ಎಂಬುದನ್ನು ಪರೀಕ್ಷಿಸುವುದಕ್ಕೆ ಮತ್ತು ಘೋಷಿಸುವುದಕ್ಕೆ ಸಂಬಂಧಿಸಿದಂತೆ ಅಂಥ ಕ್ಷೇತ್ರದಲ್ಲಿ ಅನುಭವ ಹೊಂದಿರುವ, ಒಂದು ಪ್ರಸಿದ್ಧವಾದ ಶೈಕ್ಷಣಿಕ ಅಥವಾ ಸಂಶೋಧನಾ ಸಂಸ್ಥೆ ಅಥವಾ ವಾಣಿಜ್ಯೇತರ ಸಂಸ್ಥೆಯ ಒಬ್ಬರು ಪ್ರತಿನಿಧಿ, ಇವರನ್ನೊಳಗೊಂಡ ಮೂವರು ತಜ್ಞರು ಇರುವ ಸಮಿತಿಯೊಂದು ಇರತಕ್ಕದ್ದು.

(ಸಿ) ಸಂಗ್ರಹಣಾ ಸಂಸ್ಥೆಯು, ಸರಬರಾಜುದಾರನಿಂದ ಅಥವಾ ಕರಾರುದಾರನಿಂದ ಸರಕುಗಳನ್ನು, ಸೇವೆಯನ್ನು ಅಥವಾ ತಂತ್ರಜ್ಞಾನವನ್ನು ಸಂಗ್ರಹಣೆ ಮಾಡಿಕೊಂಡಿರುವಲ್ಲಿ, ಈಗ ಸಂಗ್ರಹಿಸಿರುವ ಸರಕುಗಳು, ಸೇವೆಗಳು ಅಥವಾ ತಂತ್ರಜ್ಞಾನದ ಉತ್ಕೃಷ್ಟತೆ ಮತ್ತು ಯುಕ್ತತೆಯ ಕಾರಣಗಳಿಗಾಗಿ ಅದೇ ಸರಬರಾಜುದಾರ ಅಥವಾ ಕರಾರುದಾರನಿಂದ ಹೆಚ್ಚುವರಿ ಸರಬರಾಜುಗಳನ್ನು ಸಂಗ್ರಹಣೆ ಮಾಡಿಕೊಳ್ಳಬೇಕೆಂದು ನಿರ್ಧರಿಸಿದಲ್ಲಿ;

(ಡಿ) [4][[2][XXX][2]][4]

1[(ಇ) ಸರ್ಕಾರದ ಇಲಾಖೆಗಳಿಂದ, ರಾಜ್ಯ ಸರ್ಕಾರದ ಉದ್ಯಮಗಳಿಂದ ಅಥವಾ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಸ್ಥಾಪಿತವಾದ ಮತ್ತು ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಮಂಡಲಿ, ನಿಕಾಯ ಅಥವಾ ನಿಗಮದಿಂದ ಅಥವಾ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಅಡಿಯಲ್ಲಿ ರಚಿತವಾದ ಜಿಲ್ಲಾ ಪಂಚಾಯತ್‌ಗಳು ಅಥವಾ ಪೌರನಿಗಮಗಳ ಅಧಿನಿಯಮ, 1976ರ ಅಡಿಯಲ್ಲಿ ರಚಿತವಾದ ಪೌರನಿಗಮಗಳು ಅಥವಾ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಅಡಿಯಲ್ಲಿ ರಚಿತವಾದ ಮುನ್ಸಿಪಲ್ ಕೌನ್ಸಿಲ್‌ಗಳು ಅಥವಾ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮ, 1993ರ ಅಡಿಯಲ್ಲಿ ರಚಿತವಾದ ಹೈದರಾಬಾದ್ ಪ್ರದೇಶಾಭಿವೃದ್ಧಿ ಮಂಡಲಿ; ಅಥವಾ ಮಲ್ನಾಡು ಅಭಿವೃದ್ಧಿ ಮಂಡಲಿ ಅಧಿನಿಯಮ, 1991ರ ಅಡಿಯಲ್ಲಿ ರಚಿತವಾದ ಮಲ್ನಾಡು ಅಭಿವೃದ್ಧಿ ಮಂಡಲಿ ಅಥವಾ ಬಯಲು ಸೀಮೆ ಅಭಿವೃದ್ಧಿ ಮಂಡಲಿಯ ಅಧಿನಿಯಮ, 1994ರ ಅಡಿಯಲ್ಲಿ ರಚಿತವಾದ ಬಯಲು ಸೀಮೆ ಅಭಿವೃದ್ಧಿ ಮಂಡಲಿಯಿಂದ,–

(i) ಯಾವುವುಗಳ ಮೌಲ್ಯವು ಐದು ಲಕ್ಷ ರೂಪಾಯಿಗಳನ್ನು ಮೀರಿರುವುದಿಲ್ಲವೋ ಆ ಎಲ್ಲಾ ಬಗೆಯ [6][[5][ನಿರ್ಮಾಣ ಕಾಮಗಾರಿಗಳು ಮತ್ತು ಸಮಾಲೋಚನಾ ಸೇವೆಗಳು ಒಳಗೊಂಡಂತೆ ಸರಕುಗಳು ಮತ್ತು ಸೇವೆಗಳ][5]][6] ಸಂದರ್ಭದಲ್ಲಿ;

(ii) [7][[5][XXX][5]][7]

– ಸಂಗ್ರಹಣೆ ಮಾಡಲಾಗಿದ್ದಲ್ಲಿ,

(ಇಇ) ಸರಕುಗಳನ್ನು ಅಥವಾ ಸೇವೆಗಳನ್ನು, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಅಡಿಯಲ್ಲಿ ರಚಿತವಾದ ಗ್ರಾಮಪಂಚಾಯತಿಗಳು ಮತ್ತು ತಾಲ್ಲೂಕು ಪಂಚಾಯತಿಗಳು, ಕರ್ನಾಟಕ ಪೌರ ಸಭೆಗಳ ಅಧಿನಿಯಮ, 1964ರ ಅಡಿಯಲ್ಲಿ ರಚಿತವಾದ ಪಟ್ಟಣ ಪುರಸಭೆಗಳು ಅಥವಾ ಪಟ್ಟಣ

ಪಂಚಾಯತಿಗಳು ಅಥವಾ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1987ರ ಅಡಿಯಲ್ಲಿ ರಚಿತವಾದ ನಗರಾಭಿವೃದ್ಧಿ ಪ್ರಾಧಿಕಾರಗಳಿಂದ,-

(i) ಯಾವುವುಗಳ ಸಂಗ್ರಹಣೆಯ ಮೌಲ್ಯವು ಎರಡು ಲಕ್ಷ ರೂಪಾಯಿಗಳನ್ನು ಮೀರಿರುವುದಿಲ್ಲವೋ ಆ ಕಿರು ನೀರು ಸರಬರಾಜು ಯೋಜನೆಯ ಅನುಷ್ಠಾನದ ಅಥವಾ ಶಾಲಾಕೊಠಡಿಗಳ ನಿರ್ಮಾಣದ ಉದ್ದೇಶಕ್ಕಾಗಿ; ಮತ್ತು

(ii) ಯಾವುವುಗಳ ಸಂಗ್ರಹಣೆಯ ಮೌಲ್ಯವು ಒಂದು ಲಕ್ಷ ರೂಪಾಯಿಗಳನ್ನು ಮೀರಿರುವುದಿಲ್ಲವೋ ಅಂಥ ಇತರೆ ಉದ್ದೇಶಗಳಿಗಾಗಿ,-

- ಸಂಗ್ರಹಣೆ ಮಾಡಲಾಗಿದ್ದಲ್ಲಿ.][1]

[3][(ಇಇಇ) ಐದು ಲಕ್ಷ ರೂಪಾಯಿಗಳಿಗೆ ಮೀರದ ಮೌಲ್ಯದ ಕುಡಿಯುವ ನೀರಿನ ಸ್ಕೀಮುಗಳ ವಿದ್ಯುದೀಕರಣದ ಮೂಲ ಸೌಲಭ್ಯ ಕಾಮಗಾರಿಗಳಿಗಾಗಿ, ರಾಜ್ಯದ ಸಂಚಿತ ನಿಧಿಯಿಂದ ಅನುದಾನವನ್ನು ಸ್ವೀಕರಿಸುವ ಸಂಗ್ರಹಣಾ ಘಟಕದ ಮೂಲಕ ಸಂಗ್ರಹಣೆಯನ್ನು ಮಾಡಲಾಗಿದ್ದ ಸಂದರ್ಭದಲ್ಲಿ;][3]

[8][(ಇ4) ಸಂಗ್ರಹಣಾ ಸಂಸ್ಥೆಯು, ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಯಮಿತವು ಕಾಮಗಾರಿಗಳನ್ನು ಸ್ವಯಂ ಕಾರ್ಯಗತಗೊಳಿಸುವ ಷರತ್ತಿಗೆ ಒಳಪಟ್ಟು, ಎರಡು ಕೋಟಿ ರೂಪಾಯಿಗಳಿಗೆ ಮೀರದಿರುವ ಮೌಲ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಎಲ್ಲಾ ವಿಧದ ನಿರ್ಮಾಣ ಕಾಮಗಾರಿಗಳನ್ನು ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಯಮಿತಕ್ಕೆ ವಹಿಸಿಕೊಟ್ಟಲ್ಲಿ:

ಪರಂತು, ಉಪ-ಗುತ್ತಿಗೆಯು ಅವಶ್ಯಕವಾದ ಸಂದರ್ಭದಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಟೆಂಡರಿನ ಮೂಲಕ ಮಾಡತಕ್ಕದ್ದು:

ಮತ್ತು ಪರಂತು, ಟೆಂಡರಿನ ಮೂಲಕ ನಿರ್ಮಾಣ ಕಾಮಗಾರಿಗಳನ್ನು ಉಪ-ಗುತ್ತಿಗೆ ನೀಡುವಾಗ ಈ ಅಧಿನಿಯಮದ 6ನೇ ಪ್ರಕರಣದ ಪರಂತುಕಗಳ ಅನುಸಾರವಾಗಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿರಿಸತಕ್ಕದ್ದು.][8]

(ಎಫ್) ಸರಬರಾಜು ಮತ್ತು ವಿಲೇವಾರಿಗಳ ಮಹಾ ನಿರ್ದೇಶಕರಿಂದ ಅಥವಾ ರಾಜ್ಯದ ಸರಕು ಖರೀದಿ ಇಲಾಖೆಯಿಂದ ಸರಕುಗಳನ್ನು ಅಥವಾ ಸೇವೆಗಳನ್ನು ಸಂಗ್ರಹಣೆ ಮಾಡಿಕೊಳ್ಳಲಾಗಿದ್ದಲ್ಲಿ ;

(ಜಿ) ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ ನಿರ್ದಿಷ್ಟ ಸಂಗ್ರಹಣೆಗಳ ಸಂಬಂಧದಲ್ಲಿ; ಮತ್ತು

(ಹೆಚ್) ಸ್ಪಿನ್ನಿಂಗ್ ಮಿಲ್ಲುಗಳು ಸ್ಥಳದಲ್ಲಿಯೇ ಮಾಡುವ ಹತ್ತಿಯ ಖರೀದಿ, ಕರ್ನಾಟಕ ಕೃಷಿ ಕೈಗಾರಿಕಾ ನಿಗಮದಿಂದ ಅಥವಾ ಸಹಕಾರಿ ಎಣ್ಣೆ ಕಾಳು ಬೆಳೆಗಾರರ ಒಕ್ಕೂಟದಿಂದ ಎಣ್ಣೆ ಕಾಳುಗಳ ಖರೀದಿ, ಸಕ್ಕರೆ ಕಾರ್ಖಾನೆಯಿಂದ ಕಬ್ಬು ಖರೀದಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ಹಾಗೂ ಕರ್ನಾಟಕ ಆಹಾರ ಮತ್ತು ಸಿವಿಲ್ ಸರಬರಾಜುಗಳ ನಿಗಮದಿಂದ ಭತ್ತದ ನೇರ ಖರೀದಿ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ ಬಟ್ಟೆಗಳ ಖರೀದಿ, ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮದಿಂದ ರೇಷ್ಮೆ ಖರೀದಿ, ಕರ್ನಾಟಕ ಹಾಲು ಉತ್ಪಾದಕರ ಸಹಕಾರಿ ಒಕ್ಕೂಟದಿಂದ ಹಾಲು ಖರೀದಿ, ಕರ್ನಾಟಕ ಆಹಾರ ಮತ್ತು ಸಿವಿಲ್ ಸರಬರಾಜುಗಳ ನಿಗಮ ಮತ್ತು ಕರ್ನಾಟಕ ಸಹಕಾರಿ ಎಣ್ಣೆ ಕಾಳು ಬೆಳೆಗಾರರ ಒಕ್ಕೂಟದಿಂದ ತಾಳೆಎಣ್ಣೆ ಖರೀದಿ, ಸರ್ಕಾರದ ಇಲಾಖೆಗಳು ಮತ್ತು ಸಾರ್ವಜನಿಕ ವಲಯ ಉದ್ಯಮಗಳು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ ಮಾಡುವ ಬಟ್ಟೆಗಳ ಖರೀದಿ ಮತ್ತು ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ಅಂಥ ಇತರ ಸಂಸ್ಥೆಗಳಿಂದ ಖರೀದಿ ಅಥವಾ ಇತರ ಯಾವುದೇ ಸರಕಿನ ಖರೀದಿ ಇವುಗಳ ಸಂಬಂಧದಲ್ಲಿ,

- ಸರಕುಗಳ ಮತ್ತು ಸೇವೆಗಳ ಸಂಗ್ರಹಣೆಗೆ ಅನ್ವಯವಾಗತಕ್ಕದ್ದಲ್ಲ.

1. 2001ರ ಅಧಿನಿಯಮ ಸಂಖ್ಯೆ 21ರ ಮೂಲಕ ದಿ: 25.8.2001 ರಿಂದ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 27.3.2003 ರಿಂದ ಪ್ರತಿಯೋಜಿಸಲಾಗಿದೆ.
3. 2015ರ ಅಧಿನಿಯಮ ಸಂಖ್ಯೆ 20ರ ಮೂಲಕ ದಿ: 02.05.2015 ರಿಂದ ಸೇರಿಸಲಾಗಿದೆ.
4. 2019 ಅಧಿನಿಯಮ 06ರ ಮೂಲಕ 24.01.2019ರಿಂದ ಜಾರಿಗೆ ಬರುವಂತೆ ಬಿಟ್ಟು ಬಿಡಲಾಗಿದೆ.
5. 2019 ಅಧಿನಿಯಮ 06ರ ಮೂಲಕ 24.01.2019ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
6. 2020ರ ಅಧಿನಿಯಮ 12ರ ಮೂಲಕ 27.04.2020ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ
7. 2020ರ ಅಧಿನಿಯಮ 12ರ ಮೂಲಕ 27.04.2020ರಿಂದ ಜಾರಿಗೆ ಬರುವಂತೆ ಬಿಟ್ಟು ಬಿಡಲಾಗಿದೆ.
8. 2021ರ ಅಧಿನಿಯಮ ಸಂಖ್ಯೆ 19ರ ಮೂಲಕ ದಿ: 06.04.2021 ರಿಂದ ಸೇರಿಸಲಾಗಿದೆ.

## ಅಧ್ಯಾಯ II
## ಸಂಗ್ರಹಣದ ನಿಯಂತ್ರಣ

**5. ಟೆಂಡರ್ ಮೂಲಕವಲ್ಲದ ಇತರ ಸಂಗ್ರಹಣದ ನಿಷೇಧ.**- ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಮತ್ತು ದಿನಾಂಕದಿಂದ ಯಾವುದೇ ಸಂಗ್ರಹಣಾ ಸಂಸ್ಥೆಯು ಟೆಂಡರುಗಳನ್ನು ಆಹ್ವಾನಿಸುವ ಮೂಲಕವಲ್ಲದೆ ಸರಬರಾಜಿಗಾಗಿ ಸರಕುಗಳನ್ನು ಅಥವಾ ಸೇವೆಗಳನ್ನು ಸಂಗ್ರಹಣ ಮಾಡಿಕೊಳ್ಳತಕ್ಕದ್ದಲ್ಲ.

**6. ಸಂಗ್ರಹಣ ಸಂಸ್ಥೆಗಳು ಕಾರ್ಯವಿಧಾನವನ್ನು ಅನುಸರಿಸುವುದು.**- ಈ ಅಧಿನಿಯಮದಲ್ಲಿ ಅಥವಾ ಇದರಡಿ ರಚಿಸಿದ ನಿಯಮಗಳಲ್ಲಿ ನಿರೂಪಿಸಲಾದ ಕಾರ್ಯ ವಿಧಾನಕ್ಕನುಸಾರವಾಗಿಯಲ್ಲದೆ ಈ ಅಧಿನಿಯಮದ ಪ್ರಾರಂಭದ ತರುವಾಯ ಒಂದು ಸಂಗ್ರಹಣಾ ಸಂಸ್ಥೆಯು ಯಾವುದೇ ಟೆಂಡರನ್ನು ಆಹ್ವಾನಿಸತಕ್ಕದ್ದಲ್ಲ, ಪ್ರಕ್ರಿಯೆಗೊಳಪಡಿಸತಕ್ಕದ್ದಲ್ಲ ಅಥವಾ ಅಂಗೀಕರಿಸತಕ್ಕದ್ದಲ್ಲ.

[1][ಪರಂತು, ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು, ಅಧಿಸೂಚಿತ ಇಲಾಖೆಗಳಲ್ಲಿ ನಿಯಮಿಸಿದ ಪ್ರಕ್ರಿಯೆಗಳನ್ನು ಅನುಸರಿಸುವ ಮೂಲಕ ಕೈಗೊಳ್ಳಬೇಕಾದ ಅಗತ್ಯ ನೋಟೀಸುಗಳು, ಪತ್ರ ವ್ಯವಹಾರಗಳು ಮತ್ತು ಪ್ರಕಟಣೆಗಳನ್ನು ಹೊರಡಿಸುವಾಗ ನಿರ್ಮಾಣ ಕಾಮಗಾರಿಗಳ ಮೌಲ್ಯ 50 ಲಕ್ಷ ರೂಪಾಯಿಗಳಿಗೆ ಮೀರದ ಅಂಥ ಕಾಮಗಾರಿಗಳ ಶೇಕಡ 17.15ರಷ್ಟು ಸಂಖ್ಯೆಯನ್ನು ಮೀರದಂತೆ ಅನುಸೂಚಿತ ಜಾತಿಗಳ ವರ್ಗಕ್ಕೆ ಸೇರಿದವರಿಗೆ ಟೆಂಡರುದಾರರುಗಳ ಪೈಕಿ ಮಾತ್ರ ಟೆಂಡರನ್ನು ನೀಡತಕ್ಕದ್ದು ಮತ್ತು ಅಂಥ ಕಾಮಗಾರಿಗಳ ಶೇಕಡ 6.95ರಷ್ಟು ಸಂಖ್ಯೆಯನ್ನು ಮೀರದಂತೆ ಅನುಸೂಚಿತ ಪಂಗಡಗಳ ವರ್ಗಕ್ಕೆ ಸೇರಿದವರಿಗೆ ಟೆಂಡರುದಾರರುಗಳ ಪೈಕಿ ಮಾತ್ರ ಟೆಂಡರನ್ನು ನೀಡತಕ್ಕದ್ದು:

ಮತ್ತು ಪರಂತು, ಎರಡು ಬಾರಿಗಳಲ್ಲಿ ಆಹ್ವಾನಿಸಿರುವುದಕ್ಕೆ ಪ್ರತಿಕ್ರಿಯೆಯಾಗಿ ಅನುಸೂಚಿತ ಜಾತಿಗಳು ಅಥವಾ ಸಂದರ್ಭಾನುಸಾರವಾಗಿ ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಂದ ಟೆಂಡರ್ ಸ್ವೀಕರಿಸದಿದ್ದಲ್ಲಿ, ಅಂಥ ಕಾಮಗಾರಿಗಳನ್ನು ಇತರರಿಗೆ ಟೆಂಡರ್ ನೀಡಬಹುದು.

**ವಿವರಣೆ:**- ಈ ಪರಂತುಕದ ಉದ್ದೇಶಕ್ಕಾಗಿ,-

(1) "ಅನುಸೂಚಿತ ಜಾತಿಗಳು" ಭಾರತ ಸಂವಿಧಾನದ 341ನೇ ಅನುಚ್ಛೇದದ ಅಡಿಯಲ್ಲಿ ಮಾಡಿದ ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950ರ ಭಾಗ- VII ರಲ್ಲಿ ನಿರ್ದಿಷ್ಟಪಡಿಸಿದ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಅನುಸೂಚಿತ ಜಾತಿಗಳ ಉಲ್ಲೇಖ ಹೊಂದಿರತಕ್ಕದ್ದು.

(2) "ಅನುಸೂಚಿತ ಪಂಗಡಗಳು" ಭಾರತ ಸಂವಿಧಾನದ 342ನೇ ಅನುಚ್ಛೇದದ ಅಡಿಯಲ್ಲಿ ಮಾಡಿದ ಸಂವಿಧಾನ (ಅನುಸೂಚಿತ ಪಂಗಡಗಳು) ಆದೇಶ, 1950ರ ಭಾಗ- VI ರಲ್ಲಿ ನಿರ್ದಿಷ್ಟಪಡಿಸಿದ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಅನುಸೂಚಿತ ಪಂಗಡಗಳ ಉಲ್ಲೇಖ ಹೊಂದಿರತಕ್ಕದ್ದು.][1]

1. 2017ರ ಅಧಿನಿಯಮ ಸಂಖ್ಯೆ 31ರ ಮೂಲಕ ದಿ: 29.06.2017 ರಿಂದ ಸೇರಿಸಲಾಗಿದೆ.

[1][**6ಎ. ವಿದ್ಯುನ್ಮಾನ ಹಿಮ್ಮುಖ ಹರಾಜಿನ ಮೂಲಕ ಸಂಗ್ರಹಣೆ.**- ವಿದ್ಯುನ್ಮಾನ ಹಿಮ್ಮುಖ ಹರಾಜುಗಳಿಗೆ ಒಳಪಟ್ಟು ಅನುಸರಿಸಬೇಕಾದ ವಿಧಾನ ಮತ್ತು ಸಂಗ್ರಹಣೆಗಳ ವರ್ಗಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**6ಬಿ. ಸರ್ಕಾರಿ ಇ-ಮಾರುಕಟ್ಟೆ ಸ್ಥಳಗಳ (Gem) ಮೂಲಕ ಸಂಗ್ರಹಣೆ.**- ಸರ್ಕಾರಿ ಖರೀದಿದಾರರಿಗೆ ಸಾಮಾನ್ಯವಾಗಿ ಬಳಸುವ ಸರಕುಗಳು ಮತ್ತು ಸೇವೆಗಳಿಗಾಗಿ, ಭಾರತ ಸರ್ಕಾರದಿಂದ ಸೃಜನೆಯಾದ ಪ್ರತಿಯೊಂದು ಸಂಗ್ರಹಣೆಗಳನ್ನು ಒಳಗೊಂಡ (end to end) ಸಂಗ್ರಹಣಾ ಪದ್ಧತಿಯಾಗಿರುವ ಸರ್ಕಾರಿ ಇ-ಮಾರುಕಟ್ಟೆ ಸ್ಥಳದಲ್ಲಿ [Government e-Market place)(Gem)], ಆನ್‌ಲೈನ್ ಮೂಲಕ ಸರಕುಗಳನ್ನು ಅಥವಾ ಸೇವೆಗಳನ್ನು ಸಂಗ್ರಹಿಸಿದ್ದರೆ, ಸರ್ಕಾರವು ಅಧಿಸೂಚಿಸಬಹುದಾದ ದಿನಾಂಕದಿಂದ ಮತ್ತು ನಿಯಮಿಸಬಹುದಾದ ಅಂಥ ನಿಬಂಧನೆಗಳಿಗೆ (norms) ಒಳಪಟ್ಟಿರುವುದು.

**6ಸಿ. ಅತಿ ಸಣ್ಣ ಮತ್ತು ಸಣ್ಣ ಉದ್ದಿಮೆಗಳಿಗೆ ಆದ್ಯತೆಗಳು.**- ಅತಿ ಸಣ್ಣ ಮತ್ತು ಸಣ್ಣ ಉದ್ದಿಮೆಗಳನ್ನು ಪ್ರೋತ್ಸಾಹಿಸಲು ಸರ್ಕಾರವು ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ಅಂಥ ವಿಧಾನದಲ್ಲಿ ಆದ್ಯತೆಗಳನ್ನು ನೀಡಬಹುದು.

**ವಿವರಣೆ.**– ಈ ಪ್ರಕರಣದ ಉದ್ದೇಶಕ್ಕಾಗಿ, ಅತಿ ಸಣ್ಣ ಮತ್ತು ಸಣ್ಣ ಉದ್ದಿಮೆ ಎಂಬುದು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಭಿವೃದ್ಧಿ ಅಧಿನಿಯಮ, 2006ರಲ್ಲಿ (2006ರ ಕೇಂದ್ರ ಅಧಿನಿಯಮ 27) ಪರಿಭಾಷಿಸಿದ ಅದೇ ಅರ್ಥವನ್ನೇ ಹೊಂದಿರತಕ್ಕದ್ದು.][1]

1. 2019 ಅಧಿನಿಯಮ 06ರ ಮೂಲಕ 24.01.2019ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ

[1][**7. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್.**– (1) ರಾಜ್ಯ ಸರ್ಕಾರವು, ಸಾರ್ವಜನಿಕ ಸಂಗ್ರಹಣೆಗೆ ಸಂಬಂಧಿಸಿದ ವಿಷಯಗಳನ್ನು ಪ್ರಕಟಪಡಿಸಲು ಮತ್ತು ಪ್ರದರ್ಶಿಸಲು ಸಾರ್ವಜನಿಕರಿಗೆ ಸುಲಭವಾಗಿ ಲಭ್ಯವಾಗುವಂತೆ ರಾಜ್ಯ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ್ನು ಸ್ಥಾಪಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ಪ್ರತಿಯೊಂದು ಸಂಗ್ರಹಣೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಕೈಗೊಳ್ಳತಕ್ಕದ್ದು.

(3) ಪ್ರತಿಯೊಂದು ಸಂಗ್ರಹಣಾ ಸಂಸ್ಥೆಯು, ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳಲ್ಲಿ ಅಗತ್ಯಪಡಿಸಿದಂತೆ ಪ್ರದರ್ಶಿಸಬೇಕಾದ ಸಂಗ್ರಹಣೆಗೆ ಸಂಬಂಧಿಸಿದ ಮಾಹಿತಿಯನ್ನು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪೋರ್ಟಲ್‌ನಲ್ಲಿ ಪ್ರದರ್ಶಿಸುವಂತೆ ಮಾಡತಕ್ಕದ್ದು.

(4) ಪ್ರತಿಯೊಂದು ಸಂಗ್ರಹಣಾ ಸಂಸ್ಥೆಯು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಕರಾರು ನಿರ್ವಹಣಾ ವ್ಯವಸ್ಥಾಪನೆಯನ್ನು ಸರ್ಕಾರವು ಅಧಿಸೂಚಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ ಅಂಥ ಇಲಾಖೆಗಳಲ್ಲಿ ಕೈಗೊಳ್ಳತಕ್ಕದ್ದು.][1]

1. 2019 ಅಧಿನಿಯಮ 06ರ ಮೂಲಕ 24.01.2019ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**8.** [1][XXX][1]

1. 2019 ಅಧಿನಿಯಮ 06ರ ಮೂಲಕ 24.01.2019ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**9. ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಮತ್ತು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ.– ಸಂಗ್ರಹಣಾ ಸಂಸ್ಥೆಯು ಆದೇಶದ ಮೂಲಕ,–**

(i) ಯಾವುದೇ ನಿರ್ದಿಷ್ಟ ಪ್ರದೇಶ, ನಿರ್ದಿಷ್ಟ ಸಂಗ್ರಹಣೆ ಅಥವಾ ಸರಕುಗಳ ಅಥವಾ ಸೇವೆಗಳ ನಿರ್ದಿಷ್ಟ ವರ್ಗಕ್ಕಾಗಿ ಒಬ್ಬ ಅಥವಾ ಹೆಚ್ಚು ಅಧಿಕಾರಿಗಳನ್ನು ಅಥವಾ ಅಧಿಕಾರಿಗಳ ಒಂದು ಸಮಿತಿಯನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರವಾಗಿ, ಮತ್ತು

(ii) ಯಾವುದೇ ನಿರ್ದಿಷ್ಟ ಪ್ರದೇಶ, ನಿರ್ದಿಷ್ಟ ಸಂಗ್ರಹಣೆ ಅಥವಾ ಸರಕುಗಳ ಅಥವಾ ಸೇವೆಗಳ ನಿರ್ದಿಷ್ಟ ವರ್ಗಕ್ಕಾಗಿ ಒಬ್ಬ ಅಥವಾ ಹೆಚ್ಚು ಅಧಿಕಾರಿಗಳನ್ನು ಅಥವಾ ಅಧಿಕಾರಿಗಳ ಒಂದು ಸಮಿತಿಯನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರವಾಗಿ

– ನೇಮಕ ಮಾಡಬಹುದು :

ಪರಂತು, ಟೆಂಡರುಗಳನ್ನು ಅಂಗೀಕರಿಸುವ ಕಾರ್ಯನಿರ್ವಹಿಸಲು ಯಾವುದೇ ಸಂಗ್ರಹಣಾ ಸಂಸ್ಥೆಗೆ ಬಹು ಸದಸ್ಯರ ಸಮಿತಿಯೊಂದನ್ನು ಈಗಾಗಲೇ ನೇಮಕ ಮಾಡಿದ್ದರೆ, ಅಂಥ ಸಮಿತಿಯನ್ನು ಈ ಅಧಿನಿಯಮದ ಮೇರೆಗೆ ನೇಮಕ ಮಾಡಲಾದ ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಎಂಬುದಾಗಿ ಭಾವಿಸತಕ್ಕದ್ದು.

**10. ಟೆಂಡರ್ ಪರಿಶೀಲನಾ ಸಮಿತಿ.**– ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಸರ್ಕಾರದ ಲೋಕೋಪಯೋಗಿ ಕಾಮಗಾರಿಗಳ, ನೀರಾವರಿ ಮತ್ತು ಸಣ್ಣ ನೀರಾವರಿ ಇಲಾಖೆಗಳ ಸಂದರ್ಭದಲ್ಲಿ ಐದು ಕೋಟಿ ರೂಪಾಯಿಗಳನ್ನೂ ಮೀರಿದ ಟೆಂಡರುಗಳನ್ನು ಮತ್ತು ಇತರ ಸಂದರ್ಭಗಳಲ್ಲಿ ಒಂದು ಕೋಟಿ ರೂಪಾಯಿಗಳನ್ನು ಮೀರಿದ ಟೆಂಡರುಗಳನ್ನು ಪರಿಶೀಲಿಸಲು ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ವ್ಯಕ್ತಿಗಳನ್ನು ಒಳಗೊಂಡ ಒಂದು ಟೆಂಡರ್ ಪರಿಶೀಲನಾ ಸಮಿತಿಯನ್ನು ರಚಿಸಬಹುದು.

**11. ಟೆಂಡರ್‌ಗಳನ್ನು ತೆರೆಯುವುದು.**– (1) ಸಂಗ್ರಹಣಾ ಸಂಸ್ಥೆಯು, ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕಾಗಲಿ ಅಥವಾ ಟೆಂಡರ್ ಅಂಗೀಕರಿಸುವ ಪ್ರಾಧಿಕಾರಕ್ಕಾಗಲಿ ಅಥವಾ ಯಾವೊಬ್ಬ ಇತರ ಅಧಿಕಾರಿಗಾಗಲಿ, ಟೆಂಡರ್ ತೆರೆಯಲು ಮತ್ತು ಪ್ರತಿಯೊಂದು ಪ್ರಕರಣದಲ್ಲಿ, ಟೆಂಡರ್ ಆಹ್ವಾನಿಸಿದ ನೋಟೀಸಿಗೆ ಉತ್ತರಿಸಿದ ಟೆಂಡರ್‌ದಾರರ ಒಂದು ಪಟ್ಟಿಯನ್ನು ತಯಾರಿಸಲು ಅಧಿಕಾರ ನೀಡಬಹುದು.

(2) ಪ್ರಾಧಿಕಾರ ಅಥವಾ ಸಂದರ್ಭಾನುಸಾರ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಕಾರಿಯು, ನಿಯಮಿಸಲಾದ ರೀತಿಯಲ್ಲಿ ಟೆಂಡರನ್ನು ತೆರೆಯತಕ್ಕದ್ದು, ಟೆಂಡರ್‌ದಾರರ ಒಂದು ಪಟ್ಟಿಯನ್ನು ತಯಾರಿಸತಕ್ಕದ್ದು ಮತ್ತು ತಾನೇ ಸ್ವತಃ ಟೆಂಡರ್ ಅಂಗೀಕಾರ ಪ್ರಾಧಿಕಾರವಾಗಿದ್ದ ಹೊರತು, ಟೆಂಡರ್‌ದಾರರ ಪಟ್ಟಿಯೊಂದಿಗೆ ಆ ಟೆಂಡರ್‌ಗಳನ್ನು, ಟೆಂಡರ್ ಅಂಗೀಕರಿಸುವ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

**12. ಟೆಂಡರ್ ಆಹ್ವಾನಿಸುವ ಪ್ರಾಧಿಕಾರದ ಕರ್ತವ್ಯಗಳು.-** (1) ಈ ಮುಂದಿನವುಗಳು, ಪ್ರತಿಯೊಂದು ಟೆಂಡರ್ ಆಹ್ವಾನಿಸುವ ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು:-

(ಎ) ಸಂಗ್ರಹಣಾ ಸಂಸ್ಥೆಯ ಆಜ್ಞೆಯಂತೆ, ನಿಯಮಿಸಲಾದ ರೀತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸುವ ನೋಟೀಸನ್ನು ಹೊರಡಿಸುವುದು;

(ಬಿ) [1][XXX][1]

1. 2019 ಅಧಿನಿಯಮ 06ರ ಮೂಲಕ 24.01.2019ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(ಸಿ) ಟೆಂಡರ್‌ಗಳನ್ನು ಆಹ್ವಾನಿಸುವ ನೋಟೀಸನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ನಿಯಮಿಸಲಾದ ರೀತಿಯಲ್ಲಿ ಪ್ರಕಟಿಸುವಂತೆ ಮಾಡುವುದು;][1]

[1][(ಡಿ) ಪ್ರತಿಯೊಬ್ಬ ಉದ್ದೇಶಿತ ಟೆಂಡರುದಾರನಿಗೆ ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಲಭ್ಯವಾಗುವಂತೆ ಮಾಡುವುದು.

(ಇ) ಟೆಂಡರನ್ನು ಆಹ್ವಾನಿಸುವ ನೋಟೀಸಿಗೆ ಉತ್ತರವಾಗಿ ಸ್ವೀಕರಿಸಿದ ಟೆಂಡರುಗಳ ವಿವರಗಳನ್ನು ಒಟ್ಟುಗೂಡಿಸತಕ್ಕದ್ದು ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಟೆಂಡರುಗಳನ್ನು ತೆರೆಯಲು ಅಧಿಕೃತಗೊಳಿಸಲಾದ ಪ್ರಾಧಿಕಾರಿ ಅಥವಾ ಅಧಿಕಾರಿಗಳಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.][1]

1. 2019 ಅಧಿನಿಯಮ 06ರ ಮೂಲಕ 24.01.2019ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**13. ಟೆಂಡರ್‌ಗಳ ಅಂಗೀಕಾರ.-** ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು, ನಿಯಮಿಸಬಹುದಾದ ಅಂಥ ಕಾರ್ಯವಿಧಾನವನ್ನು ಅನುಸರಿಸಿದ ತರುವಾಯ ಟೆಂಡರನ್ನು ಅಂಗೀಕರಿಸಿದ ಬಗ್ಗೆ ಆದೇಶವನ್ನು ಹೊರಡಿಸತಕ್ಕದ್ದು ಮತ್ತು ಟೆಂಡರನ್ನು ಅಂಗೀಕರಿಸಿರುವುದಕ್ಕೆ, ಸಂಬಂಧಿಸಿದ ಮಾಹಿತಿಯನ್ನು ತುಲನಾತ್ಮಕ ವಿಶ್ಲೇಷಣೆಯೊಂದಿಗೆ ಹಾಗೂ ಟೆಂಡರ್ ಅಂಗೀಕರಿಸಿದುದಕ್ಕೆ ಕಾರಣಗಳನ್ನು ಸಂಗ್ರಹಣಾ ಸಂಸ್ಥೆಗೆ ಮತ್ತು [1][ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ][1] ತಿಳಿಸತಕ್ಕದ್ದು:

ಪರಂತು, ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು, ಟೆಂಡರ್ ಅಂಗೀಕಾರಕ್ಕೆ ಗೊತ್ತು ಮಾಡಿದ ದಿನಾಂಕದಿಂದ ಮುಂದಿನ ಆರು ತಿಂಗಳುಗಳ ಒಳಗೆ ನಿವೃತ್ತನಾಗಲಿರುವ ಒಬ್ಬನೇ ಅಧಿಕಾರಿಯನ್ನು ಒಳಗೊಂಡಿದ್ದರೆ ಅವನು, ಸಂಗ್ರಹಣಾ ಸಂಸ್ಥೆಯ ಪೂರ್ವಾನುಮೋದನೆಯನ್ನು ಪಡೆದ ತರುವಾಯವಲ್ಲದೆ, ಟೆಂಡರನ್ನು ಅಂಗೀಕರಿಸುವ ಕಾರ್ಯದಲ್ಲಿ ತೊಡಗತಕ್ಕದ್ದಲ್ಲ:

ಮತ್ತು ಪರಂತು, ಕಾಲಕಾಲಕ್ಕೆ ಸರ್ಕಾರವು ಹೊರಡಿಸಬಹುದಾದ ಅಂಥ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಒಳಪಟ್ಟು ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಟೆಂಡರ್ ಅಂಗೀಕರಿಸುವ ಆದೇಶವನ್ನು ಹೊರಡಿಸುವ ಮೊದಲು ಕನಿಷ್ಠ ಟೆಂಡರುದಾರನೊಂದಿಗೆ ವ್ಯವಹರಿಸಬಹುದು.

1. 2019 ಅಧಿನಿಯಮ 06ರ ಮೂಲಕ 24.01.2019ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**14. ಟೆಂಡರ್‌ಗಳ ಸಾಮಾನ್ಯ ತಿರಸ್ಕರಣೆ.-** (1) ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು, 13ನೇ ಪ್ರಕರಣದ ಅಡಿಯಲ್ಲಿ ಅಂಗೀಕರಿಸುವ ಆದೇಶವನ್ನು ಜಾರಿಗೊಳಿಸುವುದಕ್ಕೆ ಮೊದಲು ಯಾವುದೇ ಸಮಯದಲ್ಲಿ ಸಂಗ್ರಹಣಾ ಕಾರ್ಯ ಅನಾವಶ್ಯಕ ಅಥವಾ ಅಸಾಧ್ಯವಾಗುವಂತೆ ಮಾಡುವ ಪ್ರಾಮುಖ್ಯತೆಯಲ್ಲಿ ಉಂಟಾಗುವ ಬದಲಾವಣೆಗಳು, ನಿರೀಕ್ಷಿತ ಆರ್ಥಿಕ ಸಂಪನ್ಮೂಲಗಳು ಲಭ್ಯವಾಗದಿರುವುದು, ಅಪಘಾತಗಳು ಅಥವಾ ಆಪತ್ತುಗಳು ಅಥವಾ ನಿಯಮಿಸಬಹುದಾದ ಇತರ ಯಾವುವೇ ಕಾರಣಗಳಿಗಾಗಿ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸಬಹುದು ಮತ್ತು ಆ ಬಗ್ಗೆ ಸಂಗ್ರಹಣಾ ಸಂಸ್ಥೆಗೆ ವರದಿ ಮಾಡತಕ್ಕದ್ದು.

(2) ಸಂಗ್ರಹಣಾ ಸಂಸ್ಥೆಯು, ತದನಂತರ, ಈ ಪ್ರಕರಣದ ಮೇರೆಗೆ ತಿರಸ್ಕರಣೆಯ ವಿಷಯವನ್ನು ಎಲ್ಲಾ ಟೆಂಡರ್‌ದಾರರಿಗೆ ತಿಳಿಸತಕ್ಕದ್ದು ಮತ್ತು ಅದನ್ನು [1][ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಹ ಪ್ರಕಟಿಸುವಂತೆ ಮಾಡತಕ್ಕದ್ದು][1].

1. 2019 ಅಧಿನಿಯಮ 06ರ ಮೂಲಕ 24.01.2019ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][14ಎ. ಟೆಂಡರುದಾರರನ್ನು ಹೊರಹಾಕುವಿಕೆ (Debarment).- (1) ಸಂಗ್ರಹಣಾ ಸಂಸ್ಥೆಯನ್ನು ಸಂಗ್ರಹಣಾ ಚಟುವಟಿಕೆಯ ಯಾವುದೇ ಹಂತದಲ್ಲಿ ಮೋಸದ ಉದ್ದೇಶದೊಂದಿಗೆ ದಾರಿತಪ್ಪಿಸುವುದನ್ನು ಒಳಗೊಂಡು, ಭಾಗವಹಿಸುವಿಕೆ ಅಥವಾ ಕರಾರಿನ ಕಾರ್ಯಗತಗೊಳಿಸುವಿಕೆಯಲ್ಲಿ ಭ್ರಷ್ಟ ಅಥವಾ ಮೋಸದ ಪದ್ಧತಿಗಳಲ್ಲಿ ಭಾಗಿಯಾಗಿರುವನೆಂಬ ಆಧಾರದ ಮೇಲೆ, ಸಂಗ್ರಹಣಾ ಸಂಸ್ಥೆಯು ಮೂರು ವರ್ಷಗಳನ್ನು ಮೀರದ ಅವಧಿಗಾಗಿ ಟೆಂಡರುದಾರರನ್ನು ಅದರ ಟೆಂಡರುಗಳಲ್ಲಿ ಭಾಗವಹಿಸುವಿಕೆಯಿಂದ, ನಿಯಮಿಸಬಹುದಾದ ಅಂಥ ವಿಧಾನವನ್ನು ಅನುಸರಿಸುವ ಮೂಲಕ ಹೊರಹಾಕಬಹುದು:

ಪರಂತು, ಯಾವೊಬ್ಬ ಟೆಂಡರುದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡದೆ ಹೊರಹಾಕತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು, ಮೂರು ವರ್ಷಗಳಿಗೆ ಮೀರದ ಅವಧಿಗಾಗಿ ಟೆಂಡರುದಾರರನ್ನು ಕ್ರಿಮಿನಲ್ ಅಪರಾಧ, ಭ್ರಷ್ಟಾಚಾರ, ಸಮಗ್ರತೆ, ಪ್ರಾಮಾಣಿಕತೆ ಮತ್ತು ಕಾರ್ಯನೀತಿಗಳ (work ethics) ಆಧಾರದ ಮೇಲೆ, ಆದರೆ ರಾಜ್ಯದೊಳಗಿನ ಯಾವುದೇ ಸಂಗ್ರಹಣಾ ಚಟುವಟಿಕೆಯಲ್ಲಿ ಭಾಗವಹಿಸುವುದಕ್ಕೆ ಮಾತ್ರ ಸೀಮಿತಗೊಳಿಸದೆ ನಿಯಮಿಸಬಹುದಾದ ಅಂಥ ವಿಧಾನವನ್ನು ಅನುಸರಿಸುವ ಮೂಲಕ ಹೊರಹಾಕಬಹುದು:

ಪರಂತು, ಯಾವೊಬ್ಬ ಟೆಂಡರುದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡದೆ ಹೊರಹಾಕತಕ್ಕದ್ದಲ್ಲ.

(3) (2)ನೇ ಉಪ ಪ್ರಕರಣದ ಅಡಿಯಲ್ಲಿ ಯಾವುದೇ ಸಂಗ್ರಹಣಾ ಚಟುವಟಿಕೆಯಲ್ಲಿ ಭಾಗವಹಿಸುವುದರಿಂದ ಹಾಗೆ ಹೊರಹಾಕಲಾದ ಟೆಂಡರುದಾರರ ಪಟ್ಟಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್‌ನಲ್ಲಿ ರಾಜ್ಯ ಸರ್ಕಾರವು ಪ್ರಕಟಿಸತಕ್ಕದ್ದು.

(4) (2)ನೇ ಉಪ ಪ್ರಕರಣದ ಅಡಿಯಲ್ಲಿ ಹಾಗೆ ಹೊರಹಾಕಲಾದ ಟೆಂಡರುದಾರನು ಹಾಗೆ ಹೊರಹಾಕಲಾದ ಅವಧಿಯಲ್ಲಿ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಸಂಗ್ರಹಣಾ ಸಂಸ್ಥೆಯು, ಕರೆ ನೀಡಿದ ಟೆಂಡರುಗಳಲ್ಲಿ ಭಾಗವಹಿಸುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಲು ಅರ್ಹನಾಗಿರತಕ್ಕದ್ದಲ್ಲ.][1]

1. 2019 ಅಧಿನಿಯಮ 06ರ ಮೂಲಕ 24.01.2019ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**15. ನಿರ್ದೇಶನಗಳನ್ನು ನೀಡಲು ಅಧಿಕಾರ.**- ಸಂಗ್ರಹಣಾ ಕಾರ್ಯವಿಧಾನ ಯಾವುದೇ ಹಂತದಲ್ಲಿ ಪಾರದರ್ಶಕತೆಯನ್ನು ಹೊಂದಲು ಮತ್ತು ನಿರ್ವಹಿಸಲು ಈ ಅಧಿನಿಯಮದ ಮೇರೆಗೆ ಸಂಗ್ರಹಣಾ ಸಂಸ್ಥೆಗೆ ಅಥವಾ ಪ್ರಾಧಿಕಾರಕ್ಕೆ ಸೂಕ್ತ ನಿರ್ದೇಶನಗಳನ್ನು ನೀಡಲು ಸರ್ಕಾರವು ಸಕ್ಷಮವಾಗಿರತಕ್ಕದ್ದು ಮತ್ತು ನಿರ್ದೇಶನಗಳನ್ನು ಪಾಲಿಸುವುದು ಸಂಗ್ರಹಣ ಸಂಸ್ಥೆಯ ಅಥವಾ ಅಂಥ ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

**16. ಅಪೀಲು.**- (1) ಸರ್ಕಾರದ ಹೊರತಾಗಿ, ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು 13ನೇ ಪ್ರಕರಣದ ಮೇರೆಗೆ ಹೊರಡಿಸಿದ ಆದೇಶದಿಂದ ಬಾಧಿತನಾದ ಯಾವೊಬ್ಬ ಟೆಂಡರ್‌ದಾರನು ಆದೇಶವನ್ನು ಸ್ವೀಕರಿಸಿದ [1][ಹದಿನೈದು][1] ದಿನಗಳ ಒಳಗೆ ನಿಯಮಿಸಿದ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು :

ಪರಂತು, ಸೂಕ್ತ ಸಮಯದಲ್ಲಿ ಅಪೀಲನ್ನು ಸಲ್ಲಿಸದಿರುವುದಕ್ಕೆ ಅಪೀಲುದಾರನಿಗೆ ಸಾಕಷ್ಟು ಕಾರಣಗಳಿದ್ದುವು ಎಂಬ ಬಗ್ಗೆ ನಿಯಮಿಸಿದ ಪ್ರಾಧಿಕಾರಕ್ಕೆ ಮನವರಿಕೆಯಾದಲ್ಲಿ ಅದು, ತನ್ನ ವಿವೇಚನೆಯಂತೆ, ಅಂಥ ಯಾವುದೇ ಅಪೀಲನ್ನು ಸಲ್ಲಿಸುವುದಕ್ಕಾಗಿ [1][ಹದಿನೈದು][1] ದಿನಗಳನ್ನು ಮೀರದ ಮತ್ತಷ್ಟು ಸಮಯವನ್ನು ನೀಡಬಹುದು.

(2) ನಿಯಮಿಸಿದ ಪ್ರಾಧಿಕಾರವು ಉಭಯ ಪಕ್ಷಗಳ ಅಹವಾಲನ್ನು ಕೇಳಲು ಅವಕಾಶ ನೀಡಿದ ತರುವಾಯ, ತಾನು ಸೂಕ್ತವೆಂದು ಭಾವಿಸುವ ಅಂಥ ಆದೇಶವನ್ನು ಹೊರಡಿಸಬಹುದು ಮತ್ತು ಅಂಥ ಆದೇಶವು ಅಂತಿಮವಾಗಿರತಕ್ಕದ್ದು.

(3) ನಿಯಮಿಸಿದ ಪ್ರಾಧಿಕಾರವು ಸಾಧ್ಯವಾದಷ್ಟುಮಟ್ಟಿಗೆ ಅಪೀಲನ್ನು ಸ್ವೀಕರಿಸಿದ ದಿನಾಂಕದಿಂದ, ಮೂವತ್ತು ದಿನಗಳೊಳಗಾಗಿ ಅದನ್ನು ವಿಲೆ ಮಾಡತಕ್ಕದ್ದು.

1. 2019 ಅಧಿನಿಯಮ 06ರ ಮೂಲಕ 24.01.2019ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**17. ಮಾಹಿತಿಯನ್ನು ಪಡೆಯುವ ಅಧಿಕಾರ.**- ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಪಾರದರ್ಶಕತೆಯನ್ನು ಸುನಿಶ್ಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಸರ್ಕಾರವು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಪ್ರಾಧಿಕಾರದಿಂದ ಸಂಗ್ರಹಣೆಯ ಪ್ರಕ್ರಿಯೆಯಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ತರಿಸಿಕೊಳ್ಳಬಹುದು ಮತ್ತು ಪಡೆದುಕೊಳ್ಳಬಹುದು.

**18. ದಾಖಲೆಗಳನ್ನು ತರಿಸಿಕೊಳ್ಳುವ ಅಧಿಕಾರ.**- **ಸರ್ಕಾರವು ಯಾವುದೇ ಸಮಯದಲ್ಲಿ, ಸಂಗ್ರಹಣೆಯ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಸುನಿಶ್ಚಿತಗೊಳಿಸಿಕೊಳ್ಳುವ ದೃಷ್ಟಿಯಿಂದ, ಅಧಿನಿಯಮದ ಅಡಿಯಲ್ಲಿ ಯಾವುದೇ ಪ್ರಾಧಿಕಾರವನ್ನು,**-

(i) ಟೆಂಡರುಗಳನ್ನು ಆಹ್ವಾನಿಸುವುದಕ್ಕೆ, ಪ್ರಕ್ರಿಯೆಗೊಳಪಡಿಸುವುದಕ್ಕೆ ಮತ್ತು ಅಂಗೀಕರಿಸುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರು ಪಡಿಸುವಂತೆ ;

(ii) ಅಂಥ ಟೆಂಡರ್‌ಗಳಿಗೆ ಸಂಬಂಧಿಸಿದ ಟೆಂಡರ್ ದಸ್ತಾವೇಜು, ಅಂದಾಜುಗಳು, ತಃಖ್ತೆಗಳು, ಲೆಕ್ಕಪತ್ರಗಳು ಅಥವಾ ಅಂಕಿ ಅಂಶಗಳನ್ನು ಒದಗಿಸುವಂತೆ ; ಮತ್ತು

(iii) ಸಂಗ್ರಹಣೆಗೆ ಆನುಷಂಗಿಕವಾದ ಯಾವುದೇ ನಿರ್ದಿಷ್ಟ ಅಂಶದ ಬಗ್ಗೆ ವರದಿಯನ್ನು ಒದಗಿಸುವಂತೆ

- ಕೋರಬಹುದು.

### [1][ಅಧ್ಯಾಯ-IIಎ
### ಇ - ಸಂಗ್ರಹಣೆ

2[**XXX**]1]2

1. 2007ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿ: 27.11.2006 ರಿಂದ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು.
2. 2019 ಅಧಿನಿಯಮ 06ರ ಮೂಲಕ 24.01.2019ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

### ಅಧ್ಯಾಯ III
### ಸಂಕೀರ್ಣ

**19. ಅಧಿಕಾರಿಗಳನ್ನು ಲೋಕ ನೌಕರರು ಎಂದು ಭಾವಿಸತಕ್ಕದ್ದು.**- ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮ, ಆದೇಶ ಅಥವಾ ಅಧಿಸೂಚನೆಯ ಉಪಬಂಧಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸುತ್ತಿರುವ ಪ್ರತಿಯೊಬ್ಬ ಅಧಿಕಾರಿಯನ್ನು ಭಾರತ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ XLV) 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕನೌಕರರೆಂದು ಭಾವಿಸತಕ್ಕದ್ದು.

**20. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ಪ್ರತಿರಕ್ಷೆ.**- ಸರ್ಕಾರದ ಅಥವಾ ಅಧಿನಿಯಮದ ಅಡಿಯಲ್ಲಿ ಪ್ರಕಾರ್ಯಗಳನ್ನು ನಿರ್ವಹಿಸಲು ಅಥವಾ ಅಧಿಕಾರವನ್ನು ಚಲಾಯಿಸಲು ಅಧಿಕಾರವನ್ನು ಹೊಂದಿರುವ ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರದ ವಿರುದ್ಧ ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿರುವ ಯಾವುದೇ ಕ್ರಮದ ಸಂಬಂಧದಲ್ಲಿ ದಾವೆ ಅಥವಾ ಇತರೆ ನ್ಯಾಯಿಕ ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**21. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ.**- ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದ ಹೊರತು, ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಯಾವೊಬ್ಬ ಅಧಿಕಾರಿ ಅಥವಾ ಯಾವುದೇ ಪ್ರಾಧಿಕಾರವು ಹೊರಡಿಸಿದ ಆದೇಶವನ್ನು ಅಥವಾ ನಡೆಸಿದ ವ್ಯವಹರಣೆಗಳನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ ಮತ್ತು ಅಂಥ ಅಧಿಕಾರಿಯು ಅಥವಾ ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿ ಆತನಿಗೆ ಅಥವಾ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕೈಗೊಂಡ ಅಥವಾ ಕೈಗೊಳ್ಳಲಿರುವ ಯಾವುದೇ ಕ್ರಮದ ಸಂಬಂಧದಲ್ಲಿ, ಯಾವುದೇ ನ್ಯಾಯಾಲಯವು ನಿರ್ಬಂಧಕಾಜ್ಞೆಯನ್ನು ಹೊರಡಿಸತಕ್ಕದ್ದಲ್ಲ.

**22. ಅಧಿನಿಯಮವು ಇತರ ಕಾನೂನುಗಳ ಮೇಲೆ ಅಧ್ಯಾರೋಹಿ ಪ್ರಭಾವ ಹೊಂದಿರುವುದು.**- ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನು ಅಥವಾ ಯಾವುದೇ ರೂಢಿ ಅಥವಾ ಆಚರಣೆ, ಒಪ್ಪಂದ, ಒಂದು ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಅಥವಾ ಇತರ ಪ್ರಾಧಿಕಾರದ ಡಿಕ್ರಿ ಅಥವಾ ಆದೇಶದಲ್ಲಿ ಅದಕ್ಕೆ ಅಸಂಗತವಾಗಿ ಏನೇ ಒಳಗೊಂಡಿದ್ದರೂ ಪರಿಣಾಮಕಾರಿಯಾಗತಕ್ಕದ್ದು.

**23. ದಂಡನೆ.**- ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿತವಾದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಒಂದು ಅವಧಿಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**24. ತೊಂದರೆಗಳನ್ನು ನಿವಾರಿಸಲು ಅಧಿಕಾರ.-** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಆದೇಶದ ಮೂಲಕ ತೊಂದರೆಯನ್ನು ನಿವಾರಿಸಲು ಅಗತ್ಯವೆಂದು ಅಥವಾ ಯುಕ್ತವೆಂದು ಕಂಡುಬರುವ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದ ಅಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯ ತರುವಾಯ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**25. ನಿಯಮ ರಚನಾಧಿಕಾರ.-** (1) ಸರ್ಕಾರವು, ಅಧಿಸೂಚನೆ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು, ಅವಶ್ಯಕವಾದ ಅಂಥ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು ಅಥವಾ ಹೊರಡಿಸಿದ ಅಧಿಸೂಚನೆಯನ್ನು ಅಥವಾ ಆದೇಶವನ್ನು ಅದನ್ನು ರಚಿಸಿದ ಅಥವಾ ಹೊರಡಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನದಲ್ಲಿ ಅಥವಾ ಒಂದಾದಮೇಲೊಂದು ಬರುವ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಯಾವ ಅಧಿವೇಶನದಲ್ಲಿ ಇದನ್ನು ಮಂಡಿಸಲಾಗಿದೆಯೋ ಆ ಅಧಿವೇಶನ ಅಥವಾ ನಿಕಟ ತರುವಾಯದ ಅಧಿವೇಶನಗಳು ಮುಗಿಯುವುದಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಅಥವಾ ಆದೇಶದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ಅಧಿಸೂಚನೆಯನ್ನು ಅಥವಾ ಆದೇಶವನ್ನು ಮಾಡಕೂಡದೆಂದು ಎರಡೂ ಸದನಗಳೂ ಒಪ್ಪಿದರೆ, ಆ ತರುವಾಯ ಆ ನಿಯಮದ ಅಥವಾ ಅಧಿಸೂಚನೆ ಅಥವಾ ಆದೇಶವು ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಹಾಗಿದ್ದರೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ಅಧಿಸೂಚನೆ ಅಥವಾ ಆದೇಶದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಸಿಂಧುತ್ವಕ್ಕೆ ಪ್ರತಿಕೂಲವಾಗಿರತಕ್ಕದ್ದಲ್ಲ.

**26. ಉಳಿಸುವಿಕೆಗಳು.-** ಮೇಲಿನ ಯಾವ ವಿಷಯಗಳನ್ನು ಕಾರ್ಯ ರೂಪಕ್ಕೆ ತರುವುದಕ್ಕಾಗಿ ಈ ಅಧಿನಿಯಮವನ್ನು ಅಧಿನಿಯಮಿತಗೊಳಿಸಲಾಗಿದೆಯೋ ಆ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಥವಾ ಸಂಬಂಧಪಡುವ, ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ರಚಿಸಲಾದ ಮತ್ತು ಹೊರಡಿಸಲಾದ ಮತ್ತು ಅಂಥ ದಿನಾಂಕದಂದು ಜಾರಿಯಲ್ಲಿದ್ದ, ಎಲ್ಲಾ ನಿಯಮಗಳು, ವಿನಿಯಮಗಳು, ಆದೇಶಗಳು, ಅಧಿಸೂಚನೆಗಳು, ಇಲಾಖಾ ಸಂಹಿತೆಗಳು, ಕೈಪಿಡಿಗಳು, ಉಪವಿಧಿಗಳು, ಅಧಿಕೃತ ಜ್ಞಾಪನಗಳು, ಸುತ್ತೋಲೆಗಳು ಅಥವಾ ಇತರೆ ಯಾವುವೇ ಆದೇಶಗಳು, ಅವು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರಮಟ್ಟಿಗೆ ಮತ್ತು ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮ ಅಥವಾ ರಚಿಸಲಾದ ಯಾವುದೇ ನಿಯಮ, ಅಧಿಸೂಚನೆ ಅಥವಾ ಆದೇಶದ ಮೂಲಕ ರದ್ದುಗೊಳಿಸಲಾಗಿದ್ದ ಹೊರತು ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ಮಾಡಲಾಗಿದ್ದರೆ ಹೇಗೋ ಹಾಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು.

**27. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ, 2000ವನ್ನು (2000ದ ಕರ್ನಾಟಕ ಅಧ್ಯಾದೇಶ ಸಂಖ್ಯೆ 8) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಂಡಿದ್ದಾಗ್ಯೂ, ಸದರಿ ಅಧ್ಯಾದೇಶದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

## 2015ರ ಕರ್ನಾಟಕ ಅಧಿನಿಯಮ ಸಂಖ್ಯೆ: 20

(2015ರ ಮೇ ಎರಡನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2015**

(2015ರ ಏಪ್ರಿಲ್ ಇಪ್ಪತ್ತೊಂಬತ್ತನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನುಪಡೆಯಲಾಗಿದೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು (2000ರ ಕರ್ನಾಟಕ ಅಧಿನಿಯಮ 28) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ, ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**-(1) ಈ ಅಧಿನಿಯಮವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು.

ಪ್ರಕರಣ 4ನ್ನು ಮೂಲ ಅಧಿನಿಯಮದಲ್ಲಿ ಇಂಧೀಕರಿಸಲಾಗಿದೆ.

****

## 2017ರ ಕರ್ನಾಟಕ ಅಧಿನಿಯಮ ಸಂಖ್ಯೆ: 31

(2017ರ ಜೂನ್ 29ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2016**

(2017ರ ಜೂನ್ 20ನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು (2000ರ ಕರ್ನಾಟಕ ಅಧಿನಿಯಮ 28) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಪ್ರಕರಣ 6ನ್ನು ಮೂಲ ಅಧಿನಿಯಮದಲ್ಲಿ ಇಂಧೀಕರಿಸಲಾಗಿದೆ.

## 2019ರ ಕರ್ನಾಟಕ ಅಧಿನಿಯಮ ಸಂಖ್ಯೆ: 6

(2019ರ ಜನವರಿ 24ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2018

(2019ರ ಜನವರಿ 21ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು (2000ರ ಕರ್ನಾಟಕ ಅಧಿನಿಯಮ 29) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2018 ಎಂದು ಕರೆಯತಕ್ಕದ್ದು.

(3) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

ಪ್ರಕರಣ 2, 4, 5, 6ಎ, 6ಬಿ, 6ಸಿ, 7, 8, 12, 13, 14, 14ಎ, 16, ಮತ್ತು 18ಎ ಇವುಗಳನ್ನು ಮೂಲ ಅಧಿನಿಯಮದಲ್ಲಿ ಇಂಧೀಕರಿಸಲಾಗಿದೆ.

## 2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 12

(2020ರ ಏಪ್ರಿಲ್ ತಿಂಗಳ 27ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2020

(2020ರ ಏಪ್ರಿಲ್ ತಿಂಗಳ 24ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು (2000ರ ಕರ್ನಾಟಕ ಅಧಿನಿಯಮ 29) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

ಪ್ರಕರಣ 4ನ್ನು ಮೂಲ ಅಧಿನಿಯಮದಲ್ಲಿ ಇಂಧೀಕರಿಸಲಾಗಿದೆ.

# 2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 19

(2021ರ ಏಪ್ರಿಲ್ ತಿಂಗಳ 6ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2021**

(2021ರ ಏಪ್ರಿಲ್ ತಿಂಗಳ 5ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು (2000ರ ಕರ್ನಾಟಕ ಅಧಿನಿಯಮ 29) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತದ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **4ನೇ ಪ್ರಕರಣದ ತಿದ್ದುಪಡಿ.**- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ (2000ರ ಕರ್ನಾಟಕ ಅಧಿನಿಯಮ 29) 4ನೇ ಪ್ರಕರಣದ (ಇಇಇ)ನೇ ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಇ4) ಸಂಗ್ರಹಣಾ ಸಂಸ್ಥೆಯು, ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಯಮಿತವು ಕಾಮಗಾರಿಗಳನ್ನು ಸ್ವಯಂ ಕಾರ್ಯಗತಗೊಳಿಸುವ ಷರತ್ತಿಗೆ ಒಳಪಟ್ಟು, ಎರಡು ಕೋಟಿ ರೂಪಾಯಿಗಳಿಗೆ ಮೀರದಿರುವ ಮೌಲ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಎಲ್ಲಾ ವಿಧದ ನಿರ್ಮಾಣ ಕಾಮಗಾರಿಗಳನ್ನು ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಯಮಿತಕ್ಕೆ ವಹಿಸಿಕೊಟ್ಟಲ್ಲಿ:

ಪರಂತು, ಉಪ-ಗುತ್ತಿಗೆಯು ಅವಶ್ಯಕವಾದ ಸಂದರ್ಭದಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಟೆಂಡರಿನ ಮೂಲಕ ಮಾಡತಕ್ಕದ್ದು:

ಮತ್ತು ಪರಂತು, ಟೆಂಡರಿನ ಮೂಲಕ ನಿರ್ಮಾಣ ಕಾಮಗಾರಿಗಳನ್ನು ಉಪ-ಗುತ್ತಿಗೆ ನೀಡುವಾಗ ಈ ಅಧಿನಿಯಮದ 6ನೇ ಪ್ರಕರಣದ ಪರಂತುಕಗಳ ಅನುಸಾರವಾಗಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿರಿಸತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.